ಆದರ ಬಗ್ಗೆ ನಾನು ಕಂಪ್ಲೇಂಟ್ ಕೊಟ್ಟ್ಯಾಯಿತು. ಆದರೆ ಇದುವರೆಗೆ ರಿಪ್ಲೈ ಬರಲಿಲ್ಲ. ಇದನ್ನು ನೋಡಿದರೆ ಒಂದು ಸರ್ವಜ್ಞನ ವಚನ ಜ್ಞಾಪಕಕ್ಕೆ ಬರುತ್ತದೆ. ' ಮೂರ್ಖಂಗೆ ನೂರ್ಕಾಲ ಬುದ್ಧಿ ಹೇಳಿದರೆ, ಗೋರ್ಕಲ್ಲ ಮೇಲೆ ಮಳೆ ಹುಯ್ದಿದಂತೆ ಸರ್ವಜ್ಞ ' ಎಂದು. ಇವತ್ತು ಕಲ್ಲುಬಂಡೆಯ ಹಾಗೆ ಈ ಪೋಲೀಸ್ ಇಲಾಖೆ ಇದೆ. ಆದ್ದರಿಂದ ತಾವು ಒಂದು ನಿಭಂದನೆ ಮಾಡಬೇಕು. ಪೋಲೀಸ್ ಆಫೀಸರ್ಸ್ ಮೇಲೆ ರೆಸ್ಪಾನ್ಸಿಬಿಲಿಟಿಯನ್ನು ಫಿಕ್ಸ್ ಮಾಡಬೇಕು. ಇವತ್ತು ಪೋಲೀಸ್ ಇಲಾಖೆಯವರು ಕೆಲಸ ಮಾಡುವುದಕ್ಕೆ ಅಸಮರ್ಥರಾಗಿದ್ದಾರೆ. ಅಧಿಕಾರಿಗಳ ಮೇಲೆ ತಾವು ಹೊಣೆ ಹೊರಿಸದೇ ಹೋದರೆ ತೊಂದರೆಯಾಗುತ್ತದೆ. ಇವತ್ತು ಒಂದು ಉದಾಹರಣೆ ಹೇಳುತ್ತೇನೆ ; ಒಬ್ಬ ತಾಸಕರಿಗೆ ಪಟು ಬಿದ್ದಾಗ ಐ.ಜಿ.ಪಿ.ಯಿಂದ ಹಿಡಿದು, ಎಲ್ಲ ಗಣ್ಯ ವ್ಯಕ್ತಿಗಳೂ, ತಾಸಕರೂ ಲೆಜಿಸ್ಲೇಚರ್ ಹೋಂಗೆ ಬಂದು ನೋಡಿದರು. ಆದರೆ ಈ ಪೋಲೀಸ್ ಇಲಾಖೆಯವರು ಆ ಪುಕ್ಕಳ ಅಪಹರಣಕಾರರನ್ನು ಟ್ರೇಸ್ ಮಾಡಿ ಶಿಕ್ಷೆಗೆ ಒಳಪಡಿಸತಕ್ಕ ಸಾಮರ್ಥ್ಯ ಇವತ್ತು ಪೋಲೀಸ್ ಅಧಿಕಾರಿಗಳಿಗೆ ಇಲ್ಲವೇ ಎಂದು ನಾನು ಕೇಳುತ್ತೇನೆ. ಉನ್ನತ ಸ್ಥಾನದಲ್ಲಿರತಕ್ಕ ಜನರ ಜೀವವನ್ನು ಕಾಯತಕ್ಕ ಪೋಲೀಸ್ ಇಲಾಖೆ ಈ ದೇಶದ ಸಾಮಾನ್ಯ ಬಡ ಜನರ ಜೀವವನ್ನು ರಕ್ಷಣೆ ಮಾಡುವುದಕ್ಕಾಗುವುದಿಲ್ಲವೇ ? ಈ ತೀರ್ಮಾನ ಈಗ ಆಗಬೇಕು. ಇಂದು ಪತ್ರಿಕೆಗಳವರು ನಮ್ಮ ಕಣ್ಣು ತೆರೆಯಿಸುತ್ತಿದ್ದಾರೆ. ಈ ದಿನ ಮಂತ್ರ ಮಾಟ ಮಾಡುವವರು, ದೇವರಿಗೆ ಮೂಢನಂಬಿಕೆಯಿಂದ ಬಲಿ ಕೊಡುತ್ತಿರುವವರ ಮಾಹಿತಿಗಳನ್ನು ಮುಖಪುಟದಲ್ಲಿ ಪ್ರಕಟಿಸಿ ಪೋಲೀಸ್ ಇಲಾಖೆಗೆ ಮಾಹಿತಿಯನ್ನು ಒದಗಿಸಿಕೊಡುತ್ತಿದ್ದಾರೆ. ಈ ವಿಷಯವನ್ನು ನಾವು ಪ್ರಜಾವಾಣಿ, ಕನ್ನಡಪ್ರಭ ದಿನಪತ್ರಿಕೆಗಳಲ್ಲಿ ಕಾಣುತ್ತಿದ್ದೇವೆ. ಆದ್ದರಿಂದ ಸರ್ಕಾರದವರು ಈ ಪುಕ್ಕಳನ್ನು ಅಪಹರಿಸುವವರನ್ನು ಹಿಡಿದುಕೊಟ್ಟವರಿಗೆ ಬಹುಮಾನ ಕೊಡುತ್ತೇವೆಂದು ಪ್ರಕಟಿಸಿದಲ್ಲಿ ಏನಾದರೂ ಪತ್ತೆ ಹಚ್ಚಬಹುದಾಗಿದೆ. ಆಲ್ಲದೆ ಪೋಲೀಸ್ ಅಧಿಕಾರಿಗಳಿಗೆ ಈ ಅಪಹರಣಕಾರರನ್ನು ಹಿಡಿದುಕೊಟ್ಟರೆ ಏನಾದರೂ ರಿವಾರ್ಡ್ ಕೊಡುತ್ತೇವೆಂದು ಹೇಳಿದರೆ ಅವರು ಇನ್ನೂ ದಕ್ಷತೆಯಿಂದ ಕೆಲಸ ನಿರ್ವಹಿಸಬಹುದು.

ಇನ್ನು ಎರಡನೆಯದಾಗಿ, ಶ್ರೀಮಾನ್ ರಾಮ್‌ದೇವ್ ಅವರು ಗೂಂಡಾಗಿರಿಯ ಬಗ್ಗೆ ಹೇಳಿದರು. ಈ ಗೂಂಡಾಗಿರಿ ಮಾಡುವವರನ್ನು ಪತ್ತೆಹಚ್ಚಲು ಪೋಲೀಸ್ ಅಧಿಕಾರಿಗಳು ಅಸಮರ್ಥರಾಗಿದ್ದಾರೆ. ಆದ್ದರಿಂದ ಪ್ರತಿಯೊಬ್ಬ ಸಬ್‌ಇನ್ಸ್‌ಪೆಕ್ಟರ್ ಹೊಣೆಯನ್ನು ಅರಿತು ತಮ್ಮ ಠಾಣೆಗಳಲ್ಲಿ ಕೆಲಸ ಮಾಡ ಬೇಕಾಗುತ್ತದೆ. ಆದುದರಿಂದ ನಾನು ಇಂದು ಸರ್ಕಾರದಲ್ಲಿ ಕೇಳಿಕೊಳ್ಳುವುದೇನೆಂದರೆ, ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿರತಕ್ಕ ಅಧಿಕಾರಿಗಳ ಮೇಲೆ ರೆಸ್ಪಾನ್ಸಿಬಿಲಿಟಿ ಫಿಕ್ಸ್ ಮಾಡಿ, ಸರ್ಕಾರ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆಂದು ನಾನು ನಿರೀಕ್ಷಣೆ ಮಾಡುತ್ತಿದ್ದೇನೆ.

DEPUTY SPEAKER.—I would like to announce that the Hon'ble Chief Minister will make a statement later.

ANNOUNCEMENT

DEPUTY SPEAKER,—According to the decision taken at the Business Advisory Committee Meeting the house will sit on the 25th and 26th September 1979. There will be two sittings on both these days.

At the morning sitting on the 25th, the House will takeup Legislative Business. In the afternoon session, on 25th and on the 26th, the House will take up the motion of No Confidence. There will be no Question Hour on both these days.

Matters under Rule 312

Loss of life and property due to heavy rains in Bangalore on 13-9-79.

ಶ್ರೀ ಸಿ. ಎಂ. ಇಬ್ರಾಹಿಂ.—ಸನ್ಮಾನ್ಯ ಸಭಾದ್ಯಕ್ಷಣಿಯವರೆ, ಈಗಾಗಲೇ, ನಮ್ಮ ಕಾಲಿಂಗ್ ಅಟೆನ್‌ಷನ್‌ಗೆ ಮುಖ್ಯಮಂತ್ರಿಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಒಂದು ವಚನ ಇದೆ, ಅದೇನೆಂದರೆ, ' ಒಲವಿಲ್ಲದ ಪೂಜೆ, ನೇಹವಿಲ್ಲದ ಮಾಟ, ಆ ಪೂಜೆಯು, ಆ ಮಾಟವೂ ಚಿತ್ರದೊಳಗಿನ

ರೂಪು ಕಾಣಿರಣ್ಣಾ, ಚಿತ್ರದೊಳಗಿನ ಕಬ್ಬು ಕಾಣಿರಣ್ಣಾ, ಅಪ್ಪಿದರೆ ಸುಖವಿಲ್ಲ ಮೆಲೆದರೆ ರುಚಿಯಿಲ್ಲ .....ಕೂಡಲಸಂಗಮದೇವಾ ' ಎಂದು. ಇದೇ ೧೨ನೇ ತಾರೀಖಿನ ದಿವಸ ಏನು ಬೆಂಗಳೂರು ಮಹಾನಗರದಲ್ಲಿ ಮಳೆ ಬಿದ್ದಿತು ಅಂದು ನಗರದಲ್ಲಿ ನೂರಾರು ಮನೆಗಳು ನೆಲಸಮವಾಗಿ ೪–೫ ಜನ ಸಣ್ಣ ಮಕ್ಕಳು ಸತ್ತರು. ನನ್ನ ಕ್ಷೇತ್ರದಲ್ಲಿ, ಟ್ಯಾಂಕ್ ಬಂಡ್‌ನಲ್ಲಿ ಗುಡಿಸಲುಗಳಿಗೆ ನೀರು ನುಗ್ಗಿ ಸುಮಾರು ೪ ಮಕ್ಕಳು ಸತ್ತಿದ್ದಾರೆ. ಆದರೆ ಮಾನ್ಯ ಮಂತ್ರಿಯವರು ತಮ್ಮ ಸ್ಟೇಟ್‌ಮೆಂಟಿನಲ್ಲಿ ಕೇವಲ ಇಬ್ಬರು ಸತ್ತಿದ್ದಾರೆಂದು ಹೇಳಿದ್ದಾರೆ. ಈ ಬಗ್ಗೆ ನಾಶವಾಗಿರುವ ಗುಡಿಸಲುಗಳನ್ನು ಪುನರ್ ನಿರ್ಮಿಸಲು, ನಿರ್ಗತಿಕರಿಗೆ ದಾರಿ ತೋರಿಸಲು ಕಾರ್ಪೊರೇಷನ್‌ನವರಿಗೆ ಅನೇಕ ಜನರು ಹಲವಾರು ಸಾರಿ ಮನವಿಗಳನ್ನು ಸಲ್ಲಿಸಿದ್ದಾರೆ. ಈ ಮಳೆ ಬಂದಾಗ ಆಗುವ ತೊಂದರೆಗಳನ್ನು ನಿವಾರಿಸಲು ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುವಂತೆ, ಬಂದೋಬಸ್ತ್ ಮಾಡಲು ಕಾರ್ಪೊರೇಷನ್ ಹಾಗೂ ಸರ್ಕಾರಕ್ಕೆ ಪದೇ ಪದೇ ಮನವಿ ಸಲ್ಲಿಸಿದ್ದರೂ ಯಾವ ಕೆಲಸವನ್ನೂ ಆಲ್ಲಿ ಕೈಗೊಂಡಿಲ್ಲ. ಟ್ಯಾಂಕ್ ಬಂಡ್‌ನಲ್ಲಿ ಮಳೆ ಬಿದ್ದ ಕಾರಣ ಸುಮಾರು ೨೫೦ ಗುಡಿಸಲುಗಳು ಕಂಪ್ಲೀಟಾಗಿ ಬಿದ್ದುಹೋಗಿವೆ. ಇದೇ ರೀತಿ ಪೈಪ್‌ಲೈನ್‌ನಲ್ಲಿ ಸುಮಾರು ೩,೦೦೦ ಮನೆಗಳಿಗೆ ನೀರು ನುಗ್ಗಿದೆ. ಮಂತ್ರಿಗಳು ತಮ್ಮ ಸ್ಟೇಟ್‌ಮೆಂಟಿನಲ್ಲಿ ಮಳೆ ಬಿದ್ದು ಜನರಿಗೆ ಎಷ್ಟು ಲುಕ್ಸಾನು ಆಗಿದೆ ಎಂಬುದನ್ನು ತೋರಿಸುವುದಕ್ಕೆ ಹೋಗಿಲ್ಲ. ೨೦ ಲಕ್ಷ ರೂಪಾಯಿಯಷ್ಟು ಚರಂಡಿ ಬಿದ್ದುಹೋಗಿ ಕಾರ್ಪೊರೇಷನ್‌ಗೆ ಲುಕ್ಸಾನು ಆಗಿದೆಯೆಂದು ಹೇಳುತ್ತಿದ್ದಾರೆ. ಅಂದರೆ ಆ ಚರಂಡಿಯ ರಿಪೇರಿ ಮಾಡುವುದಕ್ಕೆ ೨೦ ಲಕ್ಷ ರೂಪಾಯಿ ಬೇಕೆಂದು ಹೇಳಿದರು. ಆದರೆ ಬಡ ಜನರು ವಾಸ ಮಾಡತಕ್ಕ ಮನೆಗಳು ಬಿದ್ದುಹೋಗಿರುವುದರಿಂದ ಅವುಗಳನ್ನು ಪುನರ್‌ನಿರ್ಮಿಸಲು ಎಸ್ಟಿಮೇಟ್ ಹಾಕಿದ್ದಾರೆಯೇ? ಎಷ್ಟು ಮನೆಗಳು ಬಿದ್ದಿವೆ, ಎಷ್ಟು ಮನೆಗಳಿಗೆ ನೀರು ನುಗ್ಗಿ ಎಷ್ಟು ಜನಕ್ಕು ವಸತಿಹೀನರಾಗಿದ್ದಾರೆ ಎಂಬುದನ್ನು ನೋಡಿ ಅವರಿಗೆ ಪುನರ್‌ವಸತಿ ಕಲ್ಪಿಸಲು ಏನಾದರೂ ಪ್ರಯತ್ನವನ್ನು ಪಟ್ಟಿದ್ದಾರೆಯೇ ? ನನ್ನ ಕ್ಷೇತ್ರದಲ್ಲಿರುವ ಟ್ಯಾಂಕ್ ಬಂಡ್ ರಿಪೇರಿ ಮಾಡುತ್ತೇವೆಂದು ಹೇಳಿ ಅದನ್ನು ಇನ್ನೂ ತೆಗೆದು ಕೊಂಡಿಲ್ಲ. ಇನ್ನೂ ಕೆಲವು ವಿಷಯಗಳನ್ನು ಮಂತ್ರಿಗಳ ಪತ್ರಿಕ ಪ್ರಶ್ನಿತ ರೂಪದಲ್ಲಿ ಕೇಳಬೇಕೆಂದಿದ್ದೇನೆ. ಮಾನ್ಯ ಮಂತ್ರಿಗಳ ಈ ಸ್ಟೇಟ್‌ಮೆಂಟ್ ಆದಮೇಲೆ ಕ್ಲಾರಿಫಿಕೇಷನ್ ಕೇಳುವುಕ್ಕೆ ಅವಕಾಶ ಕೊಡಬೇಕೆಂದು ಈಗಲೂ ನಾನು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳತ್ತೇನೆ.

೫.೨೦ ಪಿ.ಎಂ.

† ಶ್ರೀ ಟಿ. ಆರ್. ಶಾಮಣ್ಣ (ಬಸವನಗುಡಿ).—ಮಾನ್ಯ ಅಧ್ಯಕ್ಷಣಿಯವರೇ, ಈ ಸಾರಿ ಬೆಂಗಳೂರು ನಗರದಲ್ಲಿ ಮಳೆ ಬಂದು ಅನಾಹುತ ಆದಷ್ಟು ಹಿಂದೆಂದೂ ಆಗಿರಲಿಲ್ಲ. ನಮ್ಮ ರಾಷ್ಟ್ರದಲ್ಲೂ ಆಗಿಂದಾಗ್ಗೆ ಅತಿವೃಷ್ಟಿಯಿಂದ ಹೀಗಾಗುವುದು ಸರ್ವೇಸಾಮಾನ್ಯವಾಗಿರುವುದರಿಂದ ಇದರ ಬಗ್ಗೆ ಸಾಕಷ್ಟು ಎಚ್ಚರ ವಹಿಸಬೇಕು ಎನ್ನುವುದು ನನ್ನ ಅಭಿಪ್ರಾಯ. ನಾನು ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ನನಗೆ ಅನುಭವ ಇದೆ, ಸ್ಲಂ ಕ್ಲಿಯರೆನ್ಸ್ ಬೋರ್ಡ್ ಪ್ರಾರಂಭವಾಗಿ ಐದಾರು ವರ್ಷಗಳಾಯಿತು. ಇದುವರೆಗೆ ಯಾವ ಕೆಲಸವೂ ಆಗಿಲ್ಲ. ಎಲ್ಲೆಲ್ಲಿ ಡ್ರೈನೇಜ್ ಇದೆ ಅದನ್ನು ಸರಿಪಡಿಸಿ ನೀರು ನಿಲ್ಲದೆ ಇರುವ ಹಾಗೆ ಮಾಡುವುದು ಅತಿ ಆವಶ್ಯಕ. ಅನೇಕರು ಗುಡಿಸಲನ್ನು ಹಾಕಿಕೊಂಡಿದ್ದಾರೆ. ಡ್ರೈನೇಜ್ ಇಲ್ಲದೇ ಹೋದರೆ ಇಂತಹ ಅನಾಹುತಗಳು ಆಗಿಂದಾಗ್ಗೆ ಆಗುತ್ತವೆ. ಆದುದರಿಂದ ಡ್ರೈನೇಜನ್ನು ಸರಿಪಡಿಸುವುದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಹಾಗೂ ಪ್ಲಿಂತ್ ಹಾಕುವಾಗ ರೈಸ್ ಮಾಡಿದರೆ ಒಳ್ಳೆಯದು. ಭೂಮಟ್ಟಕ್ಕೆ ಇದ್ದರೆ ನೀರು ನುಗ್ಗುವ ಅಪಕಾಶವಿದೆ. ಆದುದರಿಂದ ಅದನ್ನು ರೈಸ್ ಮಾಡಬೇಕು.

ಎರಡನೆಯದಾಗಿ, ದೊಡ್ಡ ಮಳೆ ಬಂದಾಗ ಸಿಟಿ ರೈಲ್ವೆ ಸ್ಟೇಷನ್ ಪಕ್ಕದಲ್ಲಿ ಅಂಡರ್ ಬ್ರಿಡ್ಜ್ ಇದೆ. ಅಲ್ಲಿ ೭ ಅಡಿ ನೀರು ಬರುತ್ತದೆ, ಅನೇಕ ವೇಳೆ ಅಲ್ಲಿ ರಿಕ್ಷಾಗಳು, ಕಾರುಗಳು ಸಿಕ್ಕಿಕೊಂಡಿವೆ. ಇದನ್ನು ದಯವಿಟ್ಟು ನೋಡಬೇಕು. ಸುಲ್ತಾನ್‌ಪೇಟೆಯಲ್ಲಿ ಮತ್ತು ಬ್ರಿಯಾಂಡ್ ಸರ್ಕಲ್‌ನಲ್ಲೂ ಕೂಡ ಆರೇಳು ಅಡಿ ನೀರು ನಿಲ್ಲುತ್ತದೆ. ಆದುದರಿಂದ ಇದರ ಬಗ್ಗೆ ಪರಿಶೀಲನೆ ಮಾಡಿ ನೀರು ನಿಲ್ಲದೆ ಹೋಗುವುದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಮತ್ತು ಅಂಡರ್ ಗ್ರೌಂಡ್ ಡ್ರೈನೇಜ್‌ನಲ್ಲಿ ಸಿಲ್ಟ್ ಇರುವುದರಿಂದ ಅನೇಕ ಕಡೆ ನೀರು ಹೋಗುವುದಿಲ್ಲ. ಆದನ್ನು ಆಗಾಗ ಕ್ಲೀನ್ ಮಾಡಬೇಕು. ಹಾಗೂ ದೊಡ್ಡ ಪೋರಿಗಳನ್ನು ಕಲ್ಲು ಚಪ್ಪಡಿ ಹಾಕಿ ಮುಚ್ಚುವುದು ಅವಶ್ಯಕ. ಇದರ ಜೊತೆಗೆ ಮರಗಳು ಬೀಳುತ್ತಿರುತ್ತವೆ, ಆಗಿಂದಾಗ್ಗೆ ಅನೇಕ ಮರಗಳು ಬಿದ್ದು ಜನರು ಸತ್ತಿರು

ವುದು ಗೊತ್ತಿದೆ.ಇದರ ಬಗ್ಗೆ ಒಂದು ಆಫೀಸ್ ಮಾಡಿಕೊಂಡಿದ್ದಾರೆ. ಬೀಳತಕ್ಕಂಥ ಸ್ಥಿತಿಯಲ್ಲಿರುವ ಮರಗಳನ್ನು ಕೆಡವತಕ್ಕಂಥಾದ್ದು ಅವಶ್ಯಕವಿದೆ. ಏಕೆಂದರೆ, ವಯಸ್ಸಾದ ಮರಗಳು ಗಾಳಿ, ಮಳೆಗೆ ಬಿದ್ದು ಅನೇಕರಿಗೆ ತೊಂದರೆಯಾಗಿದೆ, ಆದುದರಿಂದ ಸ್ವಲ್ಪ ಎಚ್ಚರಿಕೆ ವಹಿಸದೇ ಹೋದರೆ ಆಗಿಂದಾಗ್ಗೆ ಅನಾಹುತಗಳು ಆಗುತ್ತವೆ. ಮತ್ತೆ ಜನತಾ ಬಜಾರಿನಲ್ಲಿ ಮೊನ್ನೆ ಮಳೆ ಬಂದಾಗ ನೀರು ನುಗ್ಗಿ ಲಕ್ಷಾಂತರ ರೂಪಾಯಿಗಳ ಗ್ರೈನ್ಸ್ ಹಾಳಾಗಿ ಹೋಗಿದೆ. ಜನತಾ ಬಜಾರಿನಲ್ಲಿ ನಷ್ಟವಾಗುತ್ತಾ ಇದೆ ಎಂದು ಹೇಳುತ್ತೇವೆ. ಆದರ ಜೊತೆಗೆ ಈ ರೀತಿ ಮಳೆ ಬಂದು ನೀರು ನುಗ್ಗಿ ಲಕ್ಷಾಂತರ ರೂಪಾಯಿಗಳ ಗ್ರೈನ್ಸ್ ಹಾಳಾಗಿ ಹೋಗುವುದರಿಂದ ಬಹಳ ಕಷ್ಟವಾಗುತ್ತದೆ.

(ಶ್ರೀ ಎಚ್. ಟಿ. ಕೃಷ್ಣಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಮುಖ್ಯವಾಗಿ ಕೊಳಚೆ ಪ್ರದೇಶಗಳಲ್ಲಿ ನೀರು ನಿಲ್ಲದ ಹಾಗೆ, ನೀರು ಹೋಗುವ ಹಾಗೆ ಡ್ರೈನೇಜ್ ಮಾಡಬೇಕು, ಇದರ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಸ ಂ ಕ್ಷೆಯ ರೆನ್ಸ್ ಬೋರ್ಡ್ ಕೆಲಸಮಾಡದೇ ಹೋದರೆ ಅದನ್ನು ಮುಚ್ಚಿಬಿಡುವುದು ವಾಸಿ.

ಛೇರ್ಮನ್.—ಮಂತ್ರಿಗಳು ಹೇಳಿಕೆ ಕೊಟ್ಟನಂತರ ತಾವು ಪ್ರಶ್ನೆಗಳನ್ನು ಕೇಳಿ. ಈಗ ಭಾಷಣ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಟಿ. ಆರ್. ಶಾಮಣ್ಣ.—ಬೆಂಗಳೂರು ನಗರದಲ್ಲಿ ನೂರಾರು ವರ್ಷಗಳ ಹಿಂದೆ ಕಟ್ಟಿರತಕ್ಕಂಥ ಅನೇಕ ಹಳೇ ಮನೆಗಳಿವೆ. ಕಾರ್ಪೊರೇಷನ್ ಆಕ್ಟ್‌ನಲ್ಲಿ ಹಳೇ ಮನೆಗಳಿಗೆ ನೋಟೀಸ್ ಕೊಡುವುದಕ್ಕೆ ಅವಕಾಶವಿದೆ. ಮಳೆ ಬಂದಾಗ ಹಳೇ ಮನೆಗಳು ಬಿದ್ದುಹೋಗಿ ಪ್ರಾಣನಷ್ಟವಾಗುತ್ತಾ ಇದೆ. ಯಾವ ಮನೆಗಳು ವಾಸಕ್ಕೆ ಯೋಗ್ಯವಾಗಿಲ್ಲವೋ, ಬೀಳುತ್ತವೋ ಅಂತಹ ಮನೆಗಳ ಬಗೆ ಎಕ್ಸಿಕ್ಯೂಟಿವ್ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್‌ನವರು ನಿಗಾ ವಹಿಸಬೇಕು, ಮಳೆ ಬಂದಾಗ ಎಲ್ಲಾ ಕಡೆ ಹೋಗುವ ಬದಲಾಗಿ ಮಳೆ ಇಲ್ಲದೇ ಇದ್ದಾಗ ಅವುಗಳನ್ನು ಸರಿಪಡಿಸಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಆಸಕ್ತಿ ವಹಿಸಿ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ರಾಮುದೇವ್ (ಮಲ್ಲೇಶ್ವರ).—ಮಾನ್ಯ ಅಧ್ಯಕ್ಷರೇ, ಬಹುಶಃ ೧೨ನೇ ತಾರೀಖು ಬೆಂಗಳೂರು ನಗರದಲ್ಲಿ ಬಂದಿರತಕ್ಕ ಮಳೆ ಕಳೆದ ೩೦ ವರ್ಷಗಳಿಂದ ಬಂದಿರಲಿಲ್ಲ. ಅವತ್ತಿನ ದಿವಸ ನಾನೂ ಕೂಡ ಮಳೆಯಲ್ಲಿ ನೆನೆದಿದ್ದೇನೆ. ಭೂಮಿ ಆಕಾಶ ಒಂದೇ ಎನ್ನತಕ್ಕಂತಹ ರೀತಿಯಲ್ಲಿ ಮಳೆ ಸುರಿಯಿತು. ಬೆಂಗಳೂರು ನಗರದಲ್ಲಿ ಯಾವ ರಸ್ತೆಯಲ್ಲಿ ನೋಡಿದರೂ ನೀರು ಹರಿಯುತ್ತಿತ್ತು. ನಮ್ಮ ಕ್ಷೇತ್ರದಲ್ಲಿರತಕ್ಕ ಪೈಪ್‌ಲೈನ್‌ನಲ್ಲಿ ದೊಡ್ಡ ಮೋರಿ ಇದೆ. ಅದು ಒಂದು ಸಾಧಾರಣ ಮಳೆ ಬಂದರೂ ತುಂಬಿ ಬಿಡುತ್ತದೆ. ಅವತ್ತು ರಾತ್ರಿ ಮಳೆ ಬಂದಾಗ ಸುಮಾರು ೩೦೦೦ ಮನೆಗಳಲ್ಲಿ ೩ ರಿಂದ ೬ ಅಡಿವರೆಗೆ ನೀರು ನಿಂತಿತ್ತು. ಹೆಂಗಸರು ಮಕ್ಕಳು ಬೆಂಚುಗಳ ಮೇಲೆ, ಟೇಬಲ್ ಮೇಲೆ ನಿಂತಿದ್ದುದನ್ನು ನೋಡಿದ್ದೇನೆ, ಅನೇಕ ಜನರು ನೋಡಿದ್ದಾರೆ. ಇಂತಹ ಒಂದು ಕಷ್ಟ ಪರಿಸ್ಥಿತಿಯಲ್ಲಿ ಪೋಲೀಸರಿಗೆ ಫೋನ್ ಮಾಡಿದರೆ ಪೋಲೀಸರು ಇಲ್ಲ, ಫೈರ್ ಸರ್ವೀರ್ಸ್‌ರಿಗೆ ಫೋನ್ ಮಾಡಿದರೆ ಅವರು ಇಲ್ಲ. ಆ ಜನರು ಸೇವೆ, ಸಹಾಯ ಸಹಾಯ ಎಂದು ಕೂಗುತ್ತಿದ್ದರು. ಕರ್ನಾಟಕದ ರಾಜಧಾನಿ ಬೆಂಗಳೂರು ನಗರದಲ್ಲೇ ಸರ್ಕಾರದ ಮಿಷನರಿ ಇಲ್ಲ, ಪೋಲೀಸರು ಬರಲಿಲ್ಲ, ಫೈರ್ ಸರ್ವೀಸ್‌ನವರೂ ಬರಲಿಲ್ಲ, ಕಾರ್ಪೊರೇಷನ್‌ನವರೂ ಬರಲಿಲ್ಲ. ಇಂತಹ ಸಂದರ್ಭದಲ್ಲಿ ಎಲ್ಲೂ ಕಡೆ ಅನಾಹುತವಾಗುತ್ತದೆ ಎಂದು ಗೊತ್ತಿದ್ದರೂ ಕೂಡ ಸಾಕಷ್ಟು ಲಕ್ಷ್ಯ ಕೊಡದೇ ಇರುವುದು ದುರಾದೃಷ್ಟಕರ. ಅಂಥಾ ಸಂದರ್ಭದಲ್ಲಿ ಕೆಲವು ಯುವಕರು ಪೈಪ್‌ಲೈನಿನಲ್ಲಿ ಹರಿಯತಕ್ಕ ನೀರಿನಲ್ಲೇ ಮನೆಗಳಿಗೆ ನುಗ್ಗಿ ಮಹಿಳೆಯರನ್ನು ಮತ್ತು ಮಕ್ಕಳನ್ನು ಮಹಡಿ ಮೇಲೆ ಕರೆದುಕೊಂಡು ಹೋಗಿ ಬಿಟ್ಟರು. ಯಶವಂತಪುರದಲ್ಲಿ ಇನ್ನೂ ನೀರು ನಿಂತೇ ಇದೆ. ಸುಮಾರು ೩೦೦ ಗುಡಿಸಲು ನೀರಿನಲ್ಲಿ ನಿಂತಿತ್ತು. ೧೦೦ ಗುಡಿಸಲು ಇನ್ನು ನೀರಿನಲ್ಲಿ ಮುಳುಗಿವೆ. ಸರ್ಕಾರ ಇದರ ಬಗ್ಗೆ ಏಕೆ ಗಮನ ಕೊಡಲಿಲ್ಲ ಎಂದು ಕೇಳುತ್ತೇನೆ. ಏಕೆಂದರೆ ಆಲ್ಲಿರತಕ್ಕವರು ಹಣವಂತರಲ್ಲ, ದೊಡ್ಡವರಲ್ಲ. ಬಾಡಿಗೆದಾರರು, ಕೂಲಿಗಾರರು, ವಯೋವೃದ್ಧರು, ನಿರ್ಗತಿಕರು ಇಲ್ಲಿ ವಾಸವಾಗಿದ್ದಾರೆ. ಅನೇಕ ಮನೆಗಳಲ್ಲಿ ಆಹಾರ ಪದಾರ್ಥಗಳು ಕೊಚ್ಚಿಕೊಂಡು ಹೋಗಿವೆ. ಬಟ್ಟೆ ಬರೆಗಳಿಲ್ಲ. ಎಲ್ಲವೂ ನೀರಿನಲ್ಲಿ ಕೊಚ್ಚಿಕೊಂಡು ಹೋಗಿ ಒಂದೇ ಒಂದು ಸೀರೆ ಇರತಕ್ಕಂಥ ಪೆಂಕಟಮ್ಮ ಎನ್ನುವವರನ್ನು ನಾನು ಕಣ್ಣಾರೆ ನೋಡಿದ್ದೇನೆ. ಇಂಥವರು ಅನೇಕ ಜನ

ಇದ್ದಾರೆ. ಇವರಿಗೆ ಇವತ್ತಿನವರೆಗೆ ಯಾವ ಪರಿಹಾರವೂ ಸಿಕ್ಕಿಲ್ಲ. ಇದರ ಬಗ್ಗೆ ಚೀಫ್ ಮಿನಿಸ್ಟರಿಗೆ ಪತ್ರ ಬರೆದಿದ್ದೇನೆ. ಮೋರ್ಸಿ ದುರಂತಕ್ಕೆ ೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ, ನಮ್ಮ ಕರ್ನಾಟಕ ರಾಜ್ಯದ ರಾಜಧಾನಿಯಾದ ಬೆಂಗಳೂರಿನಲ್ಲಿರತಕ್ಕ ಬಡವರಿಗೆ ಈ ಗತಿ ಆದಾಗ ಒಂದು ನಯಾಪೈಸೆ ಯನ್ನು ನಿಮ್ಮ ಪಣದಿಂದ ಕೊಡಲಿಲ್ಲವೇ ಎಂದು ಪತ್ರ ಬರೆದೆ ಅದಕ್ಕೆ ಉತ್ತರ ಇಲ್ಲ. ಇವತ್ತು ಅನೇಕ ಮನೆಗಳು ಬಿದ್ದು ಹೋಗಿವೆ, ಒಂದು ಕಡೆ ಮಾತ್ರ ಮಂತ್ರಿಗಳು ಬಂದು ಇನ್ಸ್‌ಪೆಕ್ಷನ್ ಮಾಡಿದರು. ಅವರು ದಯವಿಟ್ಟು ಎಲ್ಲಾ ಕಡೆ ಬರಬೇಕಾಗಿತ್ತು. ಈಗಲಾದರೂ ಬನ್ನಿ ಎಂದು ಕರೆಯುತ್ತೇನೆ. ತಾವು ೨೦ ಲಕ್ಷ ರೂಪಾಯಿ ಮೋರಿಗಳಿಗೆ ನಷ್ಟವಾಗಿದೆ ಎಂದು ಹೇಳಿದ್ದೀರಿ. ಆದರೆ ಜನಕ್ಕೆ ಒಂದು ಕೋಟಿ ರೂಪಾಯಿ ನಷ್ಟವಾಗಿದೆ. ಬಡವರಿಗಾಗಿ ಕೆಲವು ಕಡೆ ಗಂಜಿ ಕೇಂದ್ರ ಮಾಡಿದ್ದೀರಿ. ದಯವಿಟ್ಟು ಪರಿ ಹಾರ ಕೊಡಿ. ಆಂಧ್ರಾ ಜನರಿಗೆ ಒಂದು ಜೊತೆ ಬಟ್ಟೆ, ಊಟ ೮ ದಿವಸ ಕೊಡಿ. ಒಡೆದು ಹೋಗಿರುವ ಮನೆಗಳನ್ನು ರಿಪೇರಿ ಮಾಡಿಸಿ, ಮನೆ ಮಾಲೀಕರುಗಳು ಮನೆ ಬಿದ್ದು ಹೋದರೆ ಸಾಕು ಎಂದು ಕಾದಿರುತ್ತಾರೆ ಬಾಡಿಗೆದಾರರನ್ನು ಖಾಲಿ ಮಾಡಿಸುತ್ತಾರೆ ಈ ನೆಪದಲ್ಲಿ. ಬಾಡಿಗೆದಾರರಿಗೆ ಪ್ರೊಟೆಕ್ಷನ್ ಕೊಡಬೇಕಾದದು ಸರ್ಕಾರದ ಕರ್ತವ್ಯ. ಒಡೆದು ಹೋದ ಮನೆಗಳನ್ನು ಕಾರ್ಪೊರೇಷನ್ ಮುಖಾಂತರ ರಿಪೇರಿ ಮಾಡಿಸಿ. ಇದಕ್ಕೊಸ್ಕರ ೫ ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ; ಬ್ಯಾಂಕುಗಳಿಂದ ಹಣ ಕೊಡಿಸಬೇಕು ಎಂದೂ ಕೇಳಿಕೊಳ್ಳುತ್ತೇನೆ.

ಛೇರ್ಮನ್ —ಇನ್ನೂ ಒಬ್ಬಬ್ಬ ಸದಸ್ಯರು ಮಾತನಾಡುವವರಿದ್ದಾರೆ, ತಾವು ಒಬ್ಬರೆ ಹೆಚ್ಚು ಮಾತ ನಾಡುವುದಕ್ಕೆ ಕಾಲಾವಕಾಶವನ್ನು ತೆಗೆದುಕೊಂಡರೆ ಬೇರೆಯವರಿಗೆ ಟೈಮ್ ಸಿಕ್ಕುವುದಿಲ್ಲ ದಯವಿಟ್ಟು ಸಹಕರಿಸಬೇಕು.

ಶ್ರೀ ಪಿ. ರಾಮದೇವ್.—ಇಷ್ಟು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದ ಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ,

ಶ್ರೀ ಎಂ. ವಿ. ರಾಜಶೇಖರನ್.—ಮಾನ್ಯ ಸಭಾಪತಿಗಳೇ, ಮಾನ್ಯ ಮಂತ್ರಿಗಳವರು ಏನೊಂದು ವಿಚಾರಗಳನ್ನು ನಮ್ಮ ಮುಂದಿಟ್ಟಿದ್ದಾರೆ, ಇದೇ ರೀತಿ ಹೋದ ವರ್ಷ ಇದೇ ಸಮಯದಲ್ಲಿ ನಾವು ಒಂದು ವಿಚಾರವನ್ನು ಪ್ರಶ್ನೆ ಮಾಡಿದ್ದೆವು ಆ ಸಂದರ್ಭದಲ್ಲೂ ಸಹ ಇದರ ಬಗ್ಗೆ ಒಂದು ಪರ್ಮನೆಂಟ್ ರಿಲೀಫ್ ಮೆಜರ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಆದರೆ ಅವರು ಏನೊಂದು ಮಾಹಿತಿಯನ್ನು ಇಲ್ಲಿ ಕೊಟ್ಟಿದ್ದಾರೆ ಅದರಲ್ಲಿ ಏನೊಂದನ್ನೂ ತಿಳಿಸಿಲ್ಲ. ಏನು ಪರ್ಮನೆಂಟ್ ಮೆಜರ್ಸ್ ತೆಗೆದುಕೊಂಡಿದ್ದಾ ರೆಂಬುದನ್ನು ಹೇಳಿಲ್ಲ. ಇದು ಬೆಂಗಳೂರು ಪಟ್ಟಣದಲ್ಲಿ ಪ್ರತಿವರ್ಷವೂ ನಡೆಯುತ್ತಿರತಕ್ಕ ವಿಚಾರ ವಾಗಿದೆ, ಹಿಂದಿದ್ದಾಗ್ಲೂ ಕೂಡ ಸರ್ಕಾರ ಇದರ ಕಡೆಗೆ ಅಷ್ಟು ಕಳಿಕಳಿಯಿಂದ ಸಾಕಷ್ಟು ಗಮನವನ್ನು ಕೊಡುತ್ತಿಲ್ಲ, ಇದು ಏತಕ್ಕೆ ಹೀಗೆ ಮಾಡುತ್ತಿದ್ದಾರೆ ಎಂಬುದೇ ನಮ್ಮ ಮನಸ್ಸಿನಲ್ಲಿ ಹುಟ್ಟಿರತಕ್ಕ ಭೀತಿ. ಅವತ್ತಿನ ದಿವಸ ೧೨, ೧೩ನೇ ತಾರೀಖಿನ ದಿವಸ ಏನು ಮಳೆ ಬಿತ್ತು, ಸಭಾಪತಿಯವರೇ ಲೋ ಲೆವೆಲ್ ಗಳಲ್ಲಿ ಸಾಮಾನ್ಯವಾಗಿ ಕಡುಬಡುವರೇ ಆಗಿರತಕ್ಕಂಥವರೇ ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ, ಇದ ರಿಂದ ಅವತ್ತಿನ ದಿವಸ ಆದ ಮಳೆಯಿಂದ ಆದ ಅನಾಹುತ ಹೇಳತೀರದಷ್ಟು ಆಗಿದೆ. ಇದು ಪ್ರತಿ ವರ್ಷವೂ ನಡೆಯುತ್ತಿರತಕ್ಕಂಥದ್ದಾಗಿದ್ದರೂ ಕೂಡ ಪರ್ಮನೆಂಟ್ ಮೆಜರ್ಸ್‌ನ್ನು ಏನೂ ತೆಗೆದುಕೊಂಡಿಲ್ಲ. ಮಾನ್ಯ ಕಾರ್ಪೊರೇಷನ್ನಿನ ಇಂಜಿನಿಯರಿಂಗ್ ಸಾಹೇಬರ್‌ರವರು ಈಗ ೩-೪ ದಿವಸಗಳ ಹಿಂದೆ ಹಿಂದೂ ಪತ್ರಿಕೆಯಲ್ಲಿ ಇದಕ್ಕೆ ಕಾರಣಗಳೇನು ಎನ್ನತಕ್ಕದರ ಬಗ್ಗೆ ಬಹಳ ಜೆನ್ನಾಗಿ ವಿಶದವಾಗಿ ತಿಳಿಸಿದ್ದಾರೆ. ಇದಕ್ಕೆ ಮೊಲನೆಯ ಕಾರಣವೇನೆಂದರೆ ಮಾನ್ಯ ಸಭಾಪತಿಗಳವರೇ ತಮಗೆ ಗೊತ್ತಿರುವ ಹಾಗೆ ಬೆಂಗಳೂರು ಪಟ್ಟಣದಲ್ಲಿ ೧೬ ಕೆರೆಗಳಿದ್ದವು ಅದನ್ನೆಲಾ ಬ್ರಿಜ್ ಆಪ್ ಮಾಡಿದ್ದಾರೆ ಬ್ರೀಚ್ ಮಾಡಿದಾಗ, ಮೊದಲು ಅಲ್ಲಿಗೆ ಬಂದ ನೀರನ್ನು ಎಲ್ಲಿಗೆ ತೆಗೆದುಕೊಂಡು ಹೋಗಿ ಬಿಡುತ್ತಿದ್ದರೋ ಅಲ್ಲಿಗೆ ಹೋಗುವುದಕ್ಕೆ ವ್ಯವಸ್ಥೆ ಮಾಡಿಲ್ಲ. ಇದು ಮೊದಲನೆಯ ತಪ್ಪು. ಆದರೆ ಅವತ್ತು ಮಳೆ ಬಿದ್ದಾಗ, ಅಲ್ಲಿಯ ಜನಗಳಿಗೆ ಅನಾನು ಕೂಲವಾದಾಗ ತಕ್ಷಣವೇ ಕಾರ್ಪೊರೇಷನ್ ಅಧಿಕಾರಿಗಳು ಅಲ್ಲಿಗೆ ಹೋಗಿದ್ದಾರೆ, ತಾತ್ಕಾಲಿಕವಾಗಿ ಏನು ರಿಲೀಫ್ ಕೊಡಬೇಕೋ ಅದನ್ನೆಲ್ಲಾ ಕೊಟ್ಟಿದ್ದಾರೆ ಮಾಡಿಲ್ಲ ಅಂತ ಹೇಳಿದರೆ ತಪ್ಪಾಗುತ್ತದೆ. ಆದರೆ ಆ ರೀತಿ ಮಾಡುವಾಗ ಅವರಿಗೆ ಕೆಲವೊಂದು ಲಿಮಿಟೇಷನ್ ಇದೆ ಅಂತ ಹೇಳುವಂಥಾ ಸರ್ಕಾರ ಅದರ ಕಡೆಗೆ ಗಮನ ಕೊಡಬೇಕಾಗಿತ್ತು, ಆದರೆ ನೀವು ಕಾರ್ಪೊರೇಷನ್‌ನವರಿಗೆ ಸಾಕಷ್ಟು ಹಣ ಮತ್ತು ಸೌವಲತ್ತು ಗಳನ್ನು ಕೊಟ್ಟಿದ್ದರೆ ಅವರು ಸೂಕ್ತವಾದ ಕ್ರಮವನ್ನು ಕೈಗೊಳ್ಳುತ್ತಾರೆ ಎನ್ನುವ ನಂಬಿಕೆ ನಮಗಿದೆ. ಚೀಫ್ ಇಂಜಿನಿಯರ್ ಸಾಹೇಬರ್‌ರವರು ೨೩ನೇ ತಾರೀಖಿನ ದಿವಸ ಹಿಂದೂ ಪತ್ರಿಕೆಯಲ್ಲಿ ಏನು ವರದಿ

ಕೊಟ್ಟಿದ್ದಾರೆ ಅದರಿಂದಲೇ ಗೊತ್ತಾಗುತ್ತದೆ. ಆದುದರಿಂದ ಮಾನ್ಯ ಸಭಾಪತಿಯವರೇ ತಮ್ಮ ಮೂಲಕ ನಾವು ಮಂತ್ರಿಗಳವರನ್ನು ಏನು ಕೇಳಿ ಕೊಳ್ಳುವುದು ಎಂದರೆ ಈ ಕೋರಮಂಗಲ ಕೆರೆಯನ್ನು ಬ್ರೀಚ್ ಮಾಡಿದ್ದಾರೆ, ಆ ರೀತಿ ಮಾಡಿದ ಮೇಲೆ ಅಲ್ಲಿಗೆ ಬರತಕ್ಕ ನೀರನ್ನು ತಡೆಗಟ್ಟುವುದಕ್ಕೆ ಮತ್ತು ಆ ನೀರು ಬೇರೆ ಕಡೆಗೆ ಹೋಗಲು ಏನೇನು ಪ್ಲಾನ್ ಹಾಕಿಕೊಂಡಿದ್ದಾರೆ ಎಂಬುದನ್ನು ದಯವಿಟ್ಟು ಅವರು ತಿಳಿಸ ಬೇಕು. ನನ್ನ ಕ್ಷೇತ್ರದ ಬಗ್ಗೆ ತಮಗೆ ಹೇಳುವುದಾದರೆ ಬೆಂಗಳೂರಿನ ಸುತ್ತಮುತ್ತಲಿರತಕ್ಕಂಥ ಎಲ್ಲಾ ಸ್ಲಂಗಳಿಗಿಂತ ನನ್ನ ಕ್ಷೇತ್ರದಲ್ಲಿಯೇ ಜಾಸ್ತಿ ಗುಡಿಸಲುಗಳು ಇವೆ. ಮಾನ್ಯ ಶ್ರೀ ಪಿ. ರಾಮಮೂರ್ತಿ ಮತ್ತು ಶ್ರೀ ಶಾಮಣ್ಣನವರ ಕ್ಷೇತ್ರಗಳಿಗಿಂತ ನನ್ನ ಕ್ಷೇತ್ರದಲ್ಲಿ ಜಾಸ್ತಿ ಸ್ಲಂಗಳು ಇವೆ. ಆದರೆ ಕೆಲವು ಸ್ಲಂಗಳು ಬೆಂಗಳೂರಿನಿಂದ ಹೊರಗಡೆ ಇದ್ದವು ಅದನ್ನು ಈಗ ರಾಜಕಾರಣಕೋಸ್ಕರವಾಗಿನೋ ಏನೋ ಇನ್ನು ೧೧೦ ಹಳ್ಳಿಗಳನ್ನು ಬೆಂಗಳೂರು ಪರಿಮಿತಿಯೊಳಗೇ ಸೇರಿಸಿಕೊಂಡಿದ್ದಾರೆ. ನಮ್ಮ ಕೋರ ಮಂಗಲ ಟ್ಯಾಂಕ್ ಪಕ್ಕದಲ್ಲಿಯೇ ಸುಮಾರು ೭–೮ ಸಾವಿರ ಕಡುಬಡವರೇ ಇರುವಂಥಾ ಸ್ಥಳದಲ್ಲಿ ಆವತ್ತು ಬಿದ್ದ ಮಳೆಯಿಂದ ಒಂದೊಂದು ಮನೆಯಲ್ಲೂ ಸಹ ೨–೩ ಮಟ್ಟ ನೀರು ತುಂಬಿತ್ತು. ನಾನು ಬೆಳಿಗ್ಗೆ ಅಲ್ಲಿಗೆ ೬ ಗಂಟೆಗೆ ಹೋಗುವಷ್ಟು ಹೊತ್ತಿಗೆ ಕಾರ್ಪೊರೇಷನ್ ಅಧಿಕಾರಿಗಳು ಬಂದಿದ್ದರು. ಆವತ್ತಿನ ದಿವಸ ಘಟನೆಯಂತ್ನು ನೋಡುವುದಕ್ಕಾಗುತ್ತಿರಲಿಲ್ಲ. ಅಂಥಾ ದುಃಖಕರವಾದ ಘಟನೆ ಅದು ಆಗಿತ್ತು. ಮತ್ತೆ ಎರಡನೆಯದಾಗಿ ಸೂಯರೇಜ್ ಬೋರ್ಡ್‌ನವರ ಕೆಲವು ಲೈನುಗಳು ಬರ್ಸ್ಟ್ ಆಗಿದ್ದುದರಿಂದ, ಅದು ಬರ್ಸ್ಟ್ ಆದಾಗ ಅದರಿಂದ ಏನು ಪರಿಣಾಮವಾಗುತ್ತದೆಂಬುದು ತಮಗೆಲ್ಲಾ ಗೊತ್ತೇ ಇದೆ, ನಾವು ಇದರ ಬಗ್ಗೆ ಹಿಂದೆ ಕಳೆದ ವರ್ಷವೇ ಹೇಳಿದ್ದಾಗ್ಯೂ ಸಹ ಸರ್ಕಾರದವರು ಪರ್ಮನೆಂಟ್ ಪೈಪ್‌ಲೈನ್ಸ್‌ನ್ನು ತೆಗೆದುಕೊಳ್ಳದೇ ಇರುವುದನ್ನು ಕಂಡು ನಮಗಂತೂ ಬಹಳ ಬೇಸರವಾಗುತ್ತಿದೆ. ಆದುದರಿಂದ ಈಗಲಾದರೂ ಇದಕ್ಕೆ ಸಾಕಷ್ಟು ಹಣವನ್ನು ಕೊಡಬೇಕು ಇದರ ಜೊತೆಗೆ ಕೇಂದ್ರ ಸರ್ಕಾರದವರಿಂದ ಇದಕ್ಕೆ ಬೇಕಾದರೆ ಹಣದ ಸಹಾಯವನ್ನೂ ಸಹ ಪಡೆದುಕೊಳ್ಳಿ. ಮತ್ತೆ ಅಧ್ಯಕ್ಷರೇ ನಾನು ಈ ಸಮಯದಲ್ಲಿ ಒಂದು ಸಲಹೆ ಮಾಡಬಯಸುವುದೆನೆಂದರೆ, ಬೆಂಗಳೂರು ಪಟ್ಟಣದಲ್ಲಿ ಇದು ಯಾವಾಗಲೂ ನಡೆಯುತ್ತಿರುವುದರಿಂದ ಡಿಜಾಸ್ಟರ್ಸ್ ಸೆಲ್ ಅಂತ ಮಾಡಿದರೆ ಒಳ್ಳೆಯದು, ಆದರಲ್ಲಿ ನಮ್ಮ ಮಂತ್ರಿಗಳವರ ಇಲಾಖೆಯ ಪರವಾಗಿ ಒಬ್ಬರು ಸದಸ್ಯರು ಮತ್ತು ಬೆಂಗಳೂರು ಸೂಯರೇಜ್ ಬೋರ್ಡ್‌ನ ಪರವಾಗಿ ಒಬ್ಬರು ಇರಲಿ, ಅಲ್ಲಿಂದ ವಿದ್ಯುಚ್ಛಕ್ತಿ ಮಂಡಲಿ ಪರವಾಗಿ ಒಬ್ಬರು ಇರಲಿ, ಮತ್ತು ಕಾರ್ಪೊರೇಷನ್ ಪರವಾಗಿ ಒಬ್ಬರು ಮತ್ತೆ ಆದರಲ್ಲಿ ಕೆಲವು ಶಾಸಕರನ್ನು ಹಾಕಿ ಸ್ಥಾಪನೆ ಮಾಡಿದ್ದೇ ಆದರೆ, ಅದರಿಂದ ಸರ್ಕಾರ ಸಾಕಷ್ಟು ಮಾಹಿತಿ ಪಡೆಯುವುದಕ್ಕೆ ಅನುಕೂಲವಾಗುತ್ತದೆ. ಇಂಥಾ ಪರಿಸ್ಥಿತಿಗಳು ಉದ್ಭವವಾದಾಗ ಆ ಸಮಿತಿಯವರು ಕೂಡಲೇ ಕಾರ್ಯೋನ್ಮುಖವಾಗುವುದಕ್ಕೆ ಅನುಕೂಲವಾಗುತ್ತದೆ ಇದನ್ನು ಕೂಡಲೇ ಮಾಡಬೇಕು.

ಇನ್ನು ಕೊನೆಯದಾಗಿ ಕೋರಮಂಗಲ ಟ್ಯಾಂಕ್‌ಗೆ ಎರಡು ಪ್ರಮುಖವಾದ ನಾಲೆಗಳು ಇವೆ. ಒಂದು ನಾಲಾದ ನೀರು ಮಾರ್ಕೆಟ್‌ನಿಂದ ಪೂರ್ತಿಯಾಗಿ ಅಲ್ಲಿಗೆ ಹೋಗುತ್ತದೆ ಮತ್ತೆ ಡಬ್ಬಲ್ ರೋಡ್‌ನಿಂದ ಬರತಕ್ಕಂಥ ನೀರು ಅಲ್ಲಿಗೇ ಹೋಗುತ್ತೆ ಜೊತೆಗೆ ಕಂಟೋನ್‌ಮೆಂಟ್ ಆಸ್ಪಿನ್ ಟೌನ್‌ನಿಂದ ಬರತಕ್ಕಂಥ ೨ ನಾಲಾಗಳಲ್ಲಿ ನೀರು ಬರುವುದಕ್ಕೆ ಸಾಕಷ್ಟು ಜಾಗವಿಲ್ಲದೇ ಇರುವುದರಿಂದ ಜಾಸ್ತಿಯಾದ ನೀರನ್ನು ಹಿಂದಕ್ಕೆ ಒಡೆಯುತ್ತದೆ ಆಗ ಕೋರಮಂಗಲ ಟ್ಯಾಂಕ್ ಬಂಡ್ ಎಲ್ಲಾ ನೀರಿನಲ್ಲಿ ಮುಳುಗಿ ಹೋಗುತ್ತದೆ. ಆದುದರಿಂದ ಇದನ್ನೆಲ್ಲಾ ಮಾನ್ಯ ಸಚಿವರು ಪರಿಶೀಲನೆ ಮಾಡಿ ಸೂಕ್ತವಾದ ಏರ್ಪಾಡನ್ನು ಮಾಡಬೇಕೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **ಶ್ರೀ ಎಂ. ಚಂದ್ರಶೇಖರ್ (ಜಯನಗರ)** .—ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರ ತಮಗೆಲ್ಲಾ ಗೊತ್ತಿರುವ ಹಾಗೆ ಕೆಲವು ಕಡೆ ಮಟ್ಟವಾದ ಪ್ರದೇಶವಿದೆ, ಮತ್ತೆ ಕೆಲವು ಕಡೆ ಎತ್ತರದ ಪ್ರದೇಶವಿದೆ ಮತ್ತು ಕೆಲವು ಕಡೆ ತಗ್ಗು ಪ್ರದೇಶದಿಂದ ಕೂಡಿದೆ. ಆ ರೀತಿ ತಗ್ಗು ಇರತಕ್ಕಂಥ ಪ್ರದೇಶಗಳಲ್ಲಿ ಮಳೆಬಂದಾಗ ತಗ್ಗು ಪ್ರದೇಶದ ಕಡೆಗೆ ನೀರು ಹರಿಯತಕ್ಕಂಥದ್ದು ಸಾಮಾನ್ಯ. ಇದರಲ್ಲಿ ಏನಾಗಿದೆ ಅಂದರೆ ಮಾನ್ಯ ರಾಜಶೇಖರನ್‌ರವರು ಹೇಳಿದ ಹಾಗೆ ಅನೇಕ ಕೆರೆಗಳು ಬ್ರೀಚ್ ಆಯಿತು. ಅನೇಕ ಕಡೆ ಓಪನ್ ಆದ ದೊಡ್ಡ ದೊಡ್ಡ ಮೋರಿಗಳು ಇದ್ದವು ಅವನ್ನು ಈಗ ಕವರ್ ಮಾಡಿ ಬಿಟ್ಟಿದಾರ್ದೆ. ಇದರಿಂದ ಅದರಲ್ಲಿ ಶಿಲ್ಟ್ ಕಲೆಕ್ಟ್ ಆಗಿ ನೀರು ಹರಿಯುವುದಕ್ಕೆ ತೊಂದರೆಯಾಗುತ್ತಿದೆ. ಮೊದಲಾದರೂ ಆ ಮೋರಿಗಳಲ್ಲಿ ನಿಲ್ಲುತ್ತಿದ್ದ ಶಿಲ್ಟ್‌ನ್ನು ತೆಗೆಯುತ್ತಿದ್ದರು ಈಗ ಅದನ್ನು ತೆಗೆಯುತ್ತಿಲ್ಲ ಆದುದರಿಂದ ಬೆಂಗಳೂರಿನಲ್ಲಿರತಕ್ಕ ಮೋರಿಗಳಲ್ಲಿ ಇರುವ ಶಿಲ್ಟ್‌ಗಳನ್ನು ತೆಗೆಯಿಸತಕ್ಕ ಕಾರ್ಯಕ್ರಮವನ್ನು

ಸರ್ಕಾರದವರು ಮೊದಲು ಕೈಗೊಳ್ಳಬೇಕು. ಎರಡನೆಯದಾಗಿ ಕೆರೆ ಅಂಗಳದಲ್ಲಿಯೇ ಅದು ಏನು ಕಾರಣವೋ ಏನೋ ಹೆಚ್ಚಾಗಿ ಸ್ಲಂಗಳು ಇರುತ್ತವೆ. ಅದಕ್ಕೆ ಸ್ಲಂ ಕ್ಲಿಯರೆನ್ಸ್ ಬೋರ್ಡ್‌ನವರಿದ್ದಾರೆ, ಬಿ.ಡಿ.ಎ. ನವರಿದ್ದಾರೆ ಮತ್ತು ಕಾರ್ಪೊರೇಷನ್ನಿನವರಿದ್ದರೂ ಕೂಡ ಇವತ್ತಿನ ದಿವಸ ಅವು ಇನ್ನೂ ಡೆವಲಪ್ ಆಗುತ್ತಿವೆ.

ಆ ಕೆರೆಗಳನ್ನೇ ಡೆವಲಪ್ ಮಾಡಿ ಅಲ್ಲೇ ವಸತಿ ಮಾಡುತ್ತಿದ್ದಾರೆ. ಅದನ್ನು ತಪ್ಪಿಸಿ ಕೆರೆ ಹಳ್ಳಗಳಲ್ಲಿ ಪುಟ್ಟಿ ಸ್ಕೋರೇಜ್ ಬಿಲ್ಡಿಂಗ್ ಮಾಡಿ ಅಲ್ಲಿ ಸ್ಲಂನಲ್ಲಿರತಕ್ಕವರಿಗೆ ವಸತಿ ಮಾಡಿಕೊಡಿ. ಹೀಗೆ ಮಾಡುವುದರಿಂದ ವ್ಯಾಲಿ ಪ್ರೋರ್‌ಷನ್ ಅಭಿವೃದ್ಧಿಯಾಗುತ್ತದೆ ಗುಡಿಸಿಲಿನವರಿಗೆ ತೊಂದರೆಯಾಗುವುದಿಲ್ಲ. ಕೆಲವು ಬ್ಯಾಂಕುಗಳವರು ರಿಪೇರಿ ಕೆಲಸಗಳಿಗೆ ಸಹಾಯ ಮಾಡುತ್ತೆವೆಂದು ಹೇಳಿದ್ದಾರೆ. ಆದರೆ ಬಡವ ಬ್ಯಾಂಕುಗಳಿಗೆ ಹೋದರೆ ಶೂರಿಟಿ, ಗ್ಯಾರಂಟಿ ಕೇಳುತ್ತಾರೆ. ಅವನು ಎಲ್ಲಿಂದ ಶೂರಿಟಿ ತಂದು ಕೊಡುತ್ತಾನೆ? ಆದ್ದರಿಂದ ಅದೆಲ್ಲ ಸಾಧ್ಯವಾಗದ ಕೆಲಸವಾದ್ದರಿಂದ ಯಾವ ಯಾವ ಸ್ಲಂಗಳು ಬಿ.ಡಿ.ಎ. ಕಾರ್ಪೊರೇಷನ್ ಹಾಗೂ ಸ್ಲಂ ಕ್ಲೀಯರೆನ್ಸ್ ಬೋರ್ಡ್ ಪ್ರದೇಶಗಳಲ್ಲಿವೆ ಅದಕ್ಕೆ ಆಪರವರೇ ಗ್ಯಾರಂಟಿ ಕೊಟ್ಟು ಬ್ಯಾಂಕಿನ ಮುಖಾಂತರ ಹಣ ಸಹಾಯ ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ಒಟ್ಟಿನಲ್ಲಿ ಈ ೩ ಸಲಹೆಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಕೆ. ರಂಗನಾಥನ್ .— ಬೆಂಗಳೂರು ನಗರದ ಎಲ್ಲ ಕಡೆಯೂ ನೀರು ನುಗ್ಗಿದೆ, ನಮ್ಮ ಕ್ಷೇತ್ರದಲ್ಲೂ ನುಗ್ಗಿದೆ, ಅದನ್ನು ನಾನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ನಾನು ಮಂತ್ರಿಗಳ ಮನೆಗೆ ಹೋಗಿದ್ದೆ, ಮಂತ್ರಿಗಳ ಕ್ಷೇತ್ರದಲ್ಲಿ ವೃಷಭಾವತಿ ನಾಲೆ ಎಂದು ಇದೆ. ಅಲ್ಲಿನ ರೆವಿನ್ಯೂ ಸೈಟಿನಲ್ಲರತಕ್ಕ ಬಡಜನರ ಮನೆಗಳಿಗೆ ನೀರು ನುಗ್ಗಿರುವುದಲ್ಲದೆ ಕೋಳಿ ಫಾರಂನಲ್ಲಿ ಸುಮಾರು ಒಂದೂವರೆ ಸಾವಿರ ಕೋಳಿಗಳು ಸತ್ತಿವೆ. ಅದನ್ನು ಅಡ್ಜಿನಿಸ್ಟ್ರೇಟರ್ ನೋಡಿ ಅದು ಕಾರ್ಪೊರೇಷನ್ನಿಗೆ ಸೇರುವುದಿಲ್ಲ ಎಂದರು. ಬಿಡಿಎ. ಅವರು ನೋಡಿ ಅದು ನಮಗೆ ಸೇರುವುದಿಲ್ಲವೆಂದರು. ಹೀಗೆ ಎಲ್ಲರೂ ನಮಗೆ ಸೇರುವುದಿಲ್ಲವೆಂದರೆ ಆ ಜನರ ಗತಿ ಏನು ? ಆ ನಾಲೆ ಯಾರಿಗೆ ಸೇರಿದ್ದು ? ೪೦ ಲಕ್ಷ ರೂಪಾಯಿಯ ಯೋಜನೆಯನ್ನು ಅರ್ಧಬರ್ಧ ಮಾಡಿ ಬಿಟ್ಟಿರುವುದರಿಂದ ನಾಲೆ ತುಂಬಿದೆ, ಅದನ್ನು ಸರಿಪಡಿಸುವ ಕ್ರಮ ವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಪಂಪಾಪತಿ .—ಸ್ಲಂ ಏರಿಯಾಗಳು ಬೆಂಗಳೂರಿನಲ್ಲಿ ಮಾತ್ರವಲ್ಲ, ಬೇರೆ ಕಡೆಯೂ ಇವೆ. ಅಂಥ ಕಡೆ ಕೂಡ ನೀರು ನಿಂತಿದೆ. ಬೆಂಗಳೂರಿನಲ್ಲಿ ಮಾತ್ರವಲ್ಲ. ಇವತ್ತು ಅಲ್ಲಿ ಏನೇನು ಮಾಡಿಲ್ಲ. ಕೊಳಚೆ ಪ್ರದೇಶಗಳಲ್ಲಿರತಕ್ಕ ಮನೆಗಳು ಪ್ರತಿ ವರ್ಷ ಮಳೆಗಾಲದಲ್ಲಿ ಬೀಳುತ್ತಿವೆ.

(ಮಾನ್ಯ ಉಪ ಸಭಾಧ್ಯಕ್ಷಿಣಿಯವರು ಅಧ್ಯಕ್ಷರ ಪೀಠವನ್ನು ಅಲ್ಲಂಕರಿಸಿದರು)

ಉಪ ಸಭಾಧ್ಯಕ್ಷಿಣಿಯವರು .—ಇಲ್ಲಿರತಕ್ಕ ವಿಷಯ ಬರೀ ಬೆಂಗಳೂರಿಗೆ ಸಂಬಂಧಪಟ್ಟದ್ದು. ನಿಮ್ಮಧಕ್ಕೆ ಬೇಕಾದರೆ ಬೇರೆ ಪ್ರಶ್ನೆ ಕೇಳಬಹುದು, ಆದ್ದರಿಂದ ಈಗ ಮಾತ್ರ ಮಾತನಾಡುವುದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಪಂಪಾಪತಿ .—ಕೊಳಚೆ ಪ್ರದೇಶಗಳಲ್ಲಿ, ಬಡವರು ವಾಸಿಸತಕ್ಕ ಪ್ರದೇಶಗಳಲ್ಲಿ ನೀರು ನಿಂತು ತೊಂದರೆಯಾಗಿರುವುದು ಬೆಂಗಳೂರಿನಲ್ಲಿ ಮಾತ್ರವಲ್ಲ, ಅದು ಇಡೀ ರಾಜ್ಯದಲ್ಲಿ ಆಗಿದೆ. ಆದ್ದರಿಂದ ಅದನ್ನೆಲ್ಲಾ ಗಣನೆಗೆ ತೆಗೆದುಕೊಂಡು ಸರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

SRI H.C. SRIKANTAIAH (Minister for Municipal Administration)— Madam Deputy Speaker there were unprecedentedly heavy rains in Bangalore on the night of 12th September 1979. Thestorm water-drains were unable to carry the flood and have collapsed in several parts of the City. Huts and houses in low lying areas in Shanthinagar, Koramangala, Pipe Line area in Seshadripuram, Yeshwanthapur, Rajajinagar VI Block in the area opposite Gayatri Mills were flooded. Two children died in the collapse of houses in the Miller Tank Bed

The very next morning, the Administrator, In-charge Commissioner, Chief Engineer and Health Officers of the Bangalore City Corporation went round the City and organised emergency relief operations like removing water from the flooded areas, desilting the drains inoculating the persons living in slum areas, distributing vitamin tablets, supplying drinking water and shifting people from houses which were in a dangerous condition. The Slum Clearance Board took action to distribute bread to the persons in the worst affected areas Gruel Centres are being organised by the Bangalore City Corporation in certain areas which were badly affected.

The estimated cost of repairs to storm water drains in several areas is Rs. 20.00 Lakhs. The Corporation has taken up as an immediate remedial measure the desilting of drains and repairs to damaged drains. It is also proposed to convert all slabbed bridges into RCC bridges across the drains in order to remove obstructions in the vent-way of the drains. The City Corporation in consultation with the Bangalore Water Supply and Sewerage Board will also be taking action to either shift or improve structures viz., man-holes, seweage pipes etc., which are found blocking storm water drains. As a long range measure, diversion of part of the flood water between Sankey Tank and the Pipe-line area will also be examined in consulation with the Bangalore Water Supply and Sewerage Board.

It would thus be seen that immediate action has been taken for providing relief to the persons residing in the low lying areas of Bangalore City who were affected by the heavy rains on the night of 12 th September 1979. In addition, long range measures are being taken for preventing the recurrance of damage to life and property as a result of heavy rains.

ಈ ಬಗ್ಗೆ ಮಾನ್ಯ ಸದಸ್ಯರುಗಳಾದ ಇಬ್ರಾಹಿಂ, ಶಾಮಣ್ಣ, ರಾಮದೇವ್, ರಾಜಶೇಖರನ್ ಹಾಗೂ ಚಂದ್ರಶೇಖರ್ ಅವರುಗಳು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ ೧೨ ರಂದು ಅಗಾದ ವಾದಮಳೆಯಾದುದು ನಿಜ. ಬಹಳ ಮುಖ್ಯವಾಗಿ ತಗ್ಗು ಪ್ರದೇಶಗಳಲ್ಲಿ ಏನು ಸಣ್ಣಪುಟ್ಟ ಗುಡಿಸಲುಗಳಿವೆ ಅಲ್ಲೆಲ್ಲ ಜನರು ವಾಸಿಸುತ್ತಿದ್ದಾರೆ. ಅವರಿಗೆ ಈ ಮಳೆಯಿಂದಾಗಿ ಅಗಾದವಾದ ನಷ್ಟ ಸಂಭವಿಸಿದೆ. ಇದು ತಮಗೆಲ್ಲಾ ಗೊತ್ತಿದೆ. ಇವತ್ತು ಬೆಂಗಳೂರಿನಲ್ಲಿ ಸ್ಲಂಗಳು ಅಲ್ಲೆಲ್ಲೆ ಉದ್ಭವವಾಗುತ್ತಿವೆ. ಉದಾಹರಣೆಗೆ ನಮ್ಮ ಇಬ್ರಾಹಿಂ ಅವರು ಹೇಳಿದಂತೆ ಟ್ಯಾಂಕ್ ಬಂಡ್ ಏನಿದೆ ಅಲ್ಲಿ ಸ್ಲಂ ಹೇಗೆ ಉದ್ಭವವಾಯಿತು, ಅದಕ್ಕೆ ಯಾರು ಕಾರಣಕರ್ತರು. ಸರ್ಕಾರ ಆ ಬಗ್ಗೆ ಏನು ಕಾರ್ಯಕ್ರಮ ಹಾಕಬೇಕು ಎಂಬುದು ಒಂದು ಸಮಸ್ಯೆಯಾಗಿದೆ. ಅದು ಡಿಕ್ಲೇರ್ ಆಗಿರತಕ್ಕ ಸ್ಲಂ ಅಲ್ಲ. ಅಲ್ಲಿ ಯಾವುದೇ ಒಂದು ಮುಖ್ಯವಾದ ಕೆಲಸವನ್ನು ತೆಗೆಯುಕೊಳ್ಳಬೇಕಾದರೂ ಕಷ್ಟವಾಗುತ್ತದೆ. ಕೆಲವು ಡಿಕ್ಲೇರ್ಡ್ ಸ್ಲಂಗಳು ಏನಿವೆ ಅವು ನೋಟಿಫೈ ಆಗಿವೆ. ಅಂಥ ಕಡೆ ಸರ್ಕಾರ ಮುಂಜಾಗ್ರತೆ ಕ್ರಮವನ್ನು ಅನುಸರಿಸಬಹುದು. ಮಾನ್ಯ ರಾಜಶೇಖರನ್‌ರವರು ಹೇಳಿನ ಹಾಗೆ ಕೆಲವು ಲಾಂಗ್ ಟಿರ್ಮ್ ಮೆಷರ್ಸ್‌ಹಾಕಿ ಮುಂದೆ ಅಘಾತವಾದ ಕಡೆ ಯಾವ ರೀತಿ ಕಷ್ಟವನ್ನು ತಡಗಟ್ಟಬಹುದು ಎಂಬ ಬಗ್ಗೆ ಸರ್ಕಾರ ಹಾಗೂ ಕಾರ್ಪೊರೇಷನ್ ಕಾರ್ಯಕ್ರಮ ಹಾಕಬಹುದು. ಕೆಲವು ಕಡೆ ಯಾವುದೇ ತಗ್ಗು ಪ್ರದೇಶವಿರಲಿ, ಕೆರೆ ಅಂಗಳವಿರಲಿ ಅನ್ ಆತರೈಸಿಡ್ ಗುಡಿಸಲುಗಳನ್ನು ಕಟ್ಟುತ್ತಿದ್ದಾರೆ. ಮಳೆ ಬಂದಾಗ ನಮಗೆ ಅವರ ಕಷ್ಟ ತಿಳಿದರೂ ಕೂಡ ಈ ರೀತಿ ಅವರು ಗುಡಿಸಲುಗಳನ್ನು ಕಟ್ಟಿರುವುದರಿಂದ ಅವರ ತೊಂದರೆಗಳನ್ನು ಪರಿಹಾರ ಮಾಡುವುದಾದರೂ

ಹೇಗೆ? ತಾತ್ಕಾಲಿಕವಾಗಿ ಪರಿಹಾರ ಕೊಡಬಹುದೇ ವಿನಹ ಬೇರೇನೂ ಮಾಡುವುದಕ್ಕಾಗುವುದಿಲ್ಲ. ಆವರನ್ನು ಗತ್ಯಂತರವಿಲ್ಲದೆ ಬೆಂಗಳೂರು ನಗರದ ಹೊರಭಾಗಕ್ಕೆ ಷಿಪ್ಟ್ ಮಾಡತಕ್ಕ ಕಾರ್ಯವನ್ನು ಮಾಡಬೇಕೆ ಹೊರತು ಅವರಿಗೆ ಸ್ಥಳದಲ್ಲೇ ಬಾಯಂ ಆಗಿ ಏರ್ಪಾಡು ಮಾಡುವುದು ಕಷ್ಟವಾಗುತ್ತದೆ. ಅನೇಕ ಮಾನ್ಯ ಸದಸ್ಯರುಗಳು ಹೇಳಿದರು, ಸ್ಲಂ ಕ್ಲಿಯರೆನ್ಸ್ ಬೋರ್ಡಿನವರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು. ಬೆಂಗಳೂರು ನಗರದ ಎಲ್ಲ ಸ್ಲಂಗಳನ್ನು ನೋಟಿಫೈ ಮಾಡಿ ಎಲ್ಲ ಸ್ಲಂಗಳನ್ನು ಅದರ ವಶಕ್ಕೆ ಕೊಟ್ಟು ಸರ್ಕಾರ ಹೇರಳವಾಗಿ ಹಣ ಕೊಟ್ಟು ಸ್ಲಂ ಅಧಿವೃದ್ಧಿ ಮಾಡತಕ್ಕ ಕಾರ್ಯಕ್ರಮವನ್ನು ಪ್ರಾರಂಭ ಮಾಡುತ್ತಿದ್ದೇವೆ. ಹೀಗೆ ಪ್ರಾರಂಭ ಮಾಡುವುದಕ್ಕೆ ಏನು ಕಷ್ಟ ಇದೆ. ಏನು ಅಡಚಣೆ ಇದೆ ಎಂಬುದು ತಮಗೆಲ್ಲಾ ಗೊತ್ತಿದೆ. ಜಮೀನಿನ ಮಾಲೀಕರು ಹೈಕೋರ್ಟಿಗೆ ಹೋಗಿ ಸ್ಟೇ ಪಡೆದಿರುವುದರಿಂದ ತಿಂಗಳಾನು ಗಟ್ಟಲೆ ನಿದಾನವಾಗುತ್ತದೆ.

೬.೦೦ ಪಿ. ಎಂ.

ಈ ಸ್ಥಳಗಳನ್ನು ಕೊಳಚೆ ಪ್ರದೇಶಗಳೆಂದು ನೋಟಿಫೈ ಮಾಡಿದರೂ ಸಹ ಅವುಗಳನ್ನು ವಶಕ್ಕೆ ತೆಗೆದುಕೊಂಡು ಕೆಲಸ ಪ್ರಾರಂಭ ಮಾಡುವುದಕ್ಕೆ ತಡವಾಗಿದೆ. ಆದುದರಿಂದ, ಕೊಳಚೆ ನಿರ್ಮೂಲನೆ ಮಂಡಲಿ ಸರಿಯಾಗಿ ಕೆಲಸ ಮಾಡಲಿಲ್ಲ ಎನ್ನುವ ಮಾತು ಸರಿಯಲ್ಲ. ಕೊಳಚೆ ಪ್ರದೇಶಗಳು ಅದರ ವಶಕ್ಕೆ ಹೋದ ಮೇಲೆ ಅದು ಕೆಲಸವನ್ನು ಪ್ರಾರಂಭಿಸಬೇಕಾಗುತ್ತದೆ. ನಾನು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಕೆಲವು ಕೊಳಚೆ ಪ್ರದೇಶಗಳಿಗೆ ಭೇಟಿ ಕೊಟ್ಟಿವು. ಅಂದು ಅಲ್ಲೆಲ್ಲ ವಿಪರೀತ ಮಳೆ ಬಂತು. ಮಳೆ ಬರುತ್ತಿದ್ದರೂ ಸಹ ನಾವೆಲ್ಲ ಅಲ್ಲೆಲ್ಲ ತಿರುಗಾಡಿ ಏನೇನು ಕೆಲಸ ಕಾರ್ಯಗಳನ್ನು ತೆಗೆದು ಕೊಳ್ಳಬೇಕೆನ್ನುವ ಬಗ್ಗೆ ಸೂಕ್ತ ಸೂಚನೆಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ಮಳೆ ಬಿದ್ದ ಮಾರನೆಯ ದಿವಸ ಸಂಬಂಧಪಟ್ಟ ಅಧಿಕಾರಿಗಳಿಗೆ ಫೋನ್ ಮಾಡಿದ್ದೆ ಎಂದು ಮಾನ್ಯ ರಾಂದೇವ್ ಅವರು ತಿಳಿಸಿದರು. ಅವರು ನನಗೆ ಫೋನ್ ಮಾಡಿದ್ದರೆ.....

ಶ್ರೀ ಪಿ. ರಾಮದೇವ್ —ತಮಗೆ ತೊಂದರೆ ಕೊಡಬಾರದು ಎಂದು.....

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ತೊಂದರೆ ಎಂತಾದ್ದು ? ಪ್ರಜಾಸೇವೆ ಮಾಡಬೇಕೆಂದು ಹೊರಟಿರುವವರಿಗೆ. ಸಾರ್ವಜನಿಕ ಕಾರ್ಯಗಳನ್ನು ಮಾಡಬೇಕೆಂದು ಹೊರಟಿರುವವರಿಗೆ ಇಂತಹ ಸಂದರ್ಭಗಳಲ್ಲಿ ತೊಂದರೆ ಮಾಡಬೇಕಾಗುತ್ತದೆ. ಆದರಿಂದೇನೂ ಶಪ್ಪಾಗುವುದಿಲ್ಲ.

ಶ್ರೀ ಸಿ. ಎಂ. ಇಬ್ರಾಹಿಂ.—ರಾತ್ರಿ ಹೊತ್ತು ಮಾಡಬಹುದೇ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ರಾತ್ರಿ ಹೊತ್ತು ನಿಮಗೆ ಮಾಡಿದರೆ ಕಷ್ಟ. ಏಕೆಂದರೆ ರಾತ್ರಿ ಹೊತ್ತು ನೀವು ಸಿಕ್ಕುವುದಿಲ್ಲ ! ನಮಗೆ ಮಾಡಬಹುದು. ಮಾನ್ಯ ಸದಸ್ಯರು ಮೊದಲೇ ತಿಳಿಸಿದ್ದರೆ ಮುಂಚಿತವಾಗಿ ಕೆಲವು ತಾತ್ಕಾಲಿಕ ಕ್ರಮಗಳನ್ನು ತೆಗೆದು ಕೊಳ್ಳುವುದಕ್ಕೆ ಅನುಕೂಲವಾಗುತ್ತಿತ್ತು. ಆದರೂ ಪರವಾಗಿಲ್ಲ, ಈಗ ತಾನೇ ಎಲ್ಲವನ್ನೂ ವಿಶದವಾಗಿ ತಿಳಿಸಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಆ ಕಾರ್ಯಗಳನ್ನು ಪ್ರಾರಂಭ ಮಾಡಿಸುತ್ತೇನೆ.

ಮಾನ್ಯ ರಾಜಶೇಖರನ್ ಅವರು ಕೆಲವು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಕೊಳಚೆ ಪ್ರದೇಶಗಳಲ್ಲಿ ಖಾಯಂ ಕಾರ್ಯಗಳನ್ನು ಕೈಗೊಳ್ಳುವುದಕ್ಕಾಗಿ ಸರ್ಕಾರದವರು ಹಣವನ್ನು ಧಾರಾಳವಾಗಿ ಮಂಜೂರು ಮಾಡಬೇಕು ಮತ್ತು ಕೆಲವು ಕೆರೆಗಳನ್ನು ಬ್ರೀಚ್ ಮಾಡಿ ನೀರು ಸರಿಯಾಗಿ ಹೋಗುವುದಕ್ಕೆ ವ್ಯವಸ್ಥೆ ಮಾಡಿಲ್ಲವೆಂದು ತಿಳಿಸಿದರು. ಕೆರೆ ಆಂಗಳಕ್ಕೆ ಬರುವ ನೀರು ಹೊರಗೆ ಹೋಗುವುದಕ್ಕೆ ವ್ಯವಸ್ಥೆ ಮಾಡದೆ ಬ್ರೀಚ್ ಮಾಡುವುದು ಕಷ್ಟ. ಆದರೆ, ಸರಿಯಾದ ರೀತಿಯಲ್ಲಿ ಕೆಲಸವಾಗಿಲ್ಲವೆನ್ನುವುದು ನನಗೆ ಗೊತ್ತಿದೆ. ಈಗ ಕೆರೆ ಆಂಗಳಗಳಲ್ಲಿ ಕೊಳಚೆ ಪ್ರದೇಶಗಳು ಹುಟ್ಟಿಕೊಂಡಿವೆ. ಬೆಂಗಳೂರು ನಗರದಲ್ಲಿ ಅಗಾಧವಾದ ಸಂಖ್ಯೆಯಲ್ಲಿ ಕೊಳಚೆ ಪ್ರದೇಶಗಳು ಬೆಳೆಯುತ್ತಿವೆ ಅದಕ್ಕಾಗಿ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಬರೀ ಆವರಣವನ್ನು ರಿಹ್ಯಾಬಿಲಿಟೇಟ್ ಮಾಡುವುದಕ್ಕಾಗಿಯೇ ಒಂದು ಕೊಳಚೆ ನಗರವನ್ನೇ ಕಟ್ಟಿಬೇಕು ! ಪರಿಸ್ಥಿತಿ ಹೀಗಿದೆ. ಇಲ್ಲಿ ಏನಾಗಿದೆ ಎಂದರೆ, ಒಂದು ಕೊಳಚೆ ಪ್ರದೇಶದಲ್ಲಿ ವಾಸ ಮಾಡತಕ್ಕವರು ನಾಲ್ಕು ಕೊಳಚೆ ಪ್ರದೇಶಗಳಲ್ಲಿ ಅವರ ಗುಡಿಸಲುಗಳನ್ನು ಕಟ್ಟಿರುತ್ತಾರೆ. ಆ ಗುಡಿಸಲುಗಳನ್ನು ಪತ್ತೆ ಹಚ್ಚುವುದೇ ಕಷ್ಟ. ಒಂದು ಕಡೆ ಹೆಂಡತಿ ಹೆಸರಿನಲ್ಲಿ, ಇನ್ನೊಂದು ಕಡೆ ಮಗನ ಹೆಸರಿನಲ್ಲಿ, ಮತ್ತೊಂದು ಕಡೆ ಮಗಳ ಹೆಸರಿನಲ್ಲಿ ಗುಡಿಸಲುಗಳನ್ನು ಕಟ್ಟಿರುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—These are problems connected with clearance of slums. The immediate problem that is sought to be made out by my friends is, "how are you going to tackle an urgent situation like water-logging, collapse of the houses and all that".

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.— ಕೊಳಚೆ ಪ್ರದೇಶಗಳಲ್ಲೇ ಹೆಚ್ಚು ನಷ್ಟ ಸಂಭವಿಸಿರುವುದರಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ. ತಗ್ಗು ಪ್ರದೇಶಗಳಲ್ಲಿ ವಾಸ ಮಾಡುವವರು ಜಾಸ್ತಿ ಜನ ಕೊಳಚೆ ಪ್ರದೇಶದ ನಿವಾಸಿಗಳು. ಕೊಳಚೆ ಪ್ರದೇಶಗಳನ್ನು ತಡೆಗಟ್ಟುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡು, ಈಗಾಗಲೇ ಇರುವ ಕೊಳಚೆ ಪ್ರದೇಶಗಳನ್ನು ಸ್ಥಳಾಂತರಿಸುವ ಕಾರ್ಯವನ್ನು ನಗರ ಸಭೆಯವರು ಮತ್ತಿತರ ಸಂಬಂಧಪಟ್ಟ ಸಂಸ್ಥೆಯವರು ಮಾಡಬೇಕು. ಈ ಬಗ್ಗೆ ಖಾಯಂ ಕಾರ್ಯಗಳನ್ನು ಯಾವ ರೀತಿ ತೆಗೆದು ಕೊಳ್ಳಬೇಕೆನ್ನುವುದು ಬಹಳ ಪ್ರಾಮುಖ್ಯವಾದುದಾಗಿದೆ. ಖಾಯಂ ಕಾರ್ಯಗಳನ್ನು ಕೈಗೊಳ್ಳುವ ಬಗ್ಗೆ ಮಾನ್ಯ ರಾಜಶೇಖರನ್ ಅವರು ಪ್ರಸ್ತಾಪ ಮಾಡಿದ್ದಾರೆ ಅವರು ಹೇಳಿದಂತೆ ಮಾಡುವುದಕ್ಕೆ ಹೊರಟರೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ನಗರ ಸಭೆಯಾಗಲೀ ಅಥವಾ ಇನ್ನಾವುದೇ ಸಂಸ್ಥೆಯಾಗಲಿ ಒಂದು ಅಥವಾ ಎರಡು ವರ್ಷಗಳಲ್ಲಿ ಇಷ್ಟು ಹಣವನ್ನು ಖರ್ಚು ಮಾಡಿ ಮುಗಿಸತಕ್ಕ ಕೆಲಸವಲ್ಲ ಇವು. ಇಲ್ಲಿ ಹಣದ ಸಮಸ್ಯೆ ಇದೆ. ಆದುದರಿಂದ, ಹಣವನ್ನು ಯಾವ ರೀತಿ ಕೂಡಿಸಬೇಕು, ಯಾವ ರೀತಿ ಖರ್ಚು ಮಾಡಬೇಕು ಎನ್ನುವುದನ್ನೆಲ್ಲ ವಿಶದವಾಗಿ ಚರ್ಚೆ ಮಾಡಿ, ಇದಕ್ಕೆ ಪರಿಹಾರ ಕಂಡು ಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಳೆ ಬರುವುದನ್ನು ಯಾರೂ ತಪ್ಪಿಸುವುದಕ್ಕಾಗುವುದಿಲ್ಲ. ಆದರೆ, ಜೋರಾಗಿ ಮಳೆ ಬಂದಾಗ ಮತ್ತು ಚರಂಡಿಯಲ್ಲಿ ಹೆಚ್ಚು ನೀರು ಹೋಗುವುದಕ್ಕೆ ಆಗದೆ ರಸ್ತೆಯಂಚಿನ ಮನೆಗಳಿಗೆ ನುಗ್ಗಿದಾಗ ಅದನ್ನು ಹೊರಗೆ ಹಾಯಿಸುವುದಕ್ಕೆ ಯಾವ ವ್ಯವಸ್ಥೆಯೂ ಇಲ್ಲ. ಮಳೆ ಬಂದ ದಿನ ನಾನು ನಗರ ಸಭೆ ಮತ್ತು ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಗೆ ಸಂಬಂಧಿಸಿದ ಅಧಿಕಾರಿಗಳನ್ನು ಹಾಗೂ ಆಗ್ನಿಶಾಮಕ ದಳದವರನ್ನು ಫೋನಿನ ಮುಖಾಂತರ ಸಂಪರ್ಕ ಕಲ್ಪಿಸಿ ಪರಿಸ್ಥಿತಿಯನ್ನು ವಿವರಿಸಿದಾಗ "ನಮ್ಮಲ್ಲಿ ಸದ್ಯ ಯಾವ ವ್ಯವಸ್ಥೆಯೂ ಇಲ್ಲ, ಮುಂದೆ ಯೋಚನೆ ಮಾಡಲಾಗುವುದೆಂದು" ತಿಳಿಸಿದರು. ತಗ್ಗು ಪ್ರದೇಶದಲ್ಲಿರುವ ಮನೆಗಳಿಗೆ ನುಗ್ಗಿದ ನೀರನ್ನು ಹೊಳಕೆಗೆಯಲು ಮತ್ತು ಮನೆಗಳು ಕುಸಿದಾಗ ಅವರಿಗೆ ರಕ್ಷಣೆ ನೀಡಲು ನಮ್ಮಲ್ಲಿ ಏನಾದರೂ ಸಿಬ್ಬಂದಿ ಇದೆಯೇ ? ಇಲ್ಲ. ಆದುದರಿಂದ ಒಂದು ದಳವನ್ನು ರಚನೆ ಮಾಡಿ ಜನರ ತೊಂದರೆಯನ್ನು ತಕ್ಷಣ ನೀಗಿಸುವುದಕ್ಕೆ ಒಂದು ವಾರದ ಒಳಗೆ ಏನಾದರೂ ಕ್ರಮ ಕೈಗೊಳ್ಳುವಿರಾ ?

ಶ್ರೀ ಹೆಚ್. ಸಿ. ಕಂಠಯ್ಯ —ಇದು ಖಂಡಿತವಾಗಿ ಯೋಚನೆ ಮಾಡಬೇಕಾದ ವಿಚಾರ. ನಗರ ಸಭೆ ವತಿಯಿಂದ ಒಂದು ದಳವನ್ನು ಏರ್ಪಾಡು ಮಾಡಿ, ಅಪಘಾತ ನಡೆದ ಕಡೆ ತಕ್ಷಣ ಪರಿಹಾರ ಕೊಡುವ ಹಾಗೆ ವ್ಯವಸ್ಥೆ ಮಾಡಬೇಕೆಂದು ನಗರಸಭೆಗೆ ಆದೇಶ ಕೊಡುತ್ತೇನೆ.

ಶ್ರೀ ಪಿ. ರಾಮದೇವ್.—ತೊಂದರೆಗೊಳಗಾದವರಿಗೆ "ಮುಖ್ಯ ಮಂತ್ರಿಗಳ ನಿಧಿಯಿಂದ" ಸ್ವಲ್ಪ ಹಣವನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡುವಿರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ತೊಂದರೆಗೊಳಗಾದವರಿಗೆ ಸರ್ಕಾರ ಮತ್ತು ನಗರ ಸಭೆ—ಎರಡೂ ಈಗಾಗಲೇ ಸಾಕಷ್ಟು ಹಣ ಖರ್ಚು ಮಾಡಿವೆ.

ಶ್ರೀ ಎಂ. ವಿ. ರಾಜಶೇಖರನ್.—ತಾತ್ಕಾಲಿಕ ಕ್ರಮಗಳನ್ನು ಕೈಗೊಂಡು ತೊಂದರೆಗೊಳಗಾದವರಿಗೆ ಬ್ರೆಡ್ ಮುಂತಾದುವುಗಳನ್ನು ಹಂಚಿದ್ದೇವೆ ಎಂದು ಮಾನ್ಯ ಸಚಿವರು ತಿಳಿಸಿದರು. ಎಲ್ಲಿ ನೂರಾರು ಮನೆಗಳು ಬಿದ್ದು ಹೋಗಿವೆ. ಅವುಗಳಿಗೆ ಪರಿಹಾರ ಕೊಡಲು ಏನು ಕ್ರಮ ತೆಗೆದುಕೊಳ್ಳಲಾಗಿದೆ ? ಮಾನ್ಯ ಉಪಾಧ್ಯಕ್ಷರೇ, ಈ ಸದನದಲ್ಲಿ ಒಂದು ನಿರ್ಣಯ ಮಾಡಬೇಕಾಗಿದೆ. ಅದೇನೆಂದರೆ, ಮನೆ ಬರುವ ದಿನಗಳಂದು ಮುಖ್ಯಮಂತ್ರಿಗಳು ಮತ್ತು ಇತರ ಸಚಿವರುಗಳು ತಮ್ಮ ಸಂಸಾರ ಸಮೇತ ತಗ್ಗು ಪ್ರದೇಶಗಳಲ್ಲಿರುವ ಗುಡಿಸಲುಗಳಿಗೆ ಹೋಗಿ ವಾಸ ಮಾಡಬೇಕು. ಮತ್ತು ಅಲ್ಲಿ ವಾಸ ಮಾಡುವವರು ಸಚಿವರುಗಳ ಮನೆಗೆ ಬಂದು ವಾಸ ಮಾಡಬೇಕು ಎಂದು. ಆಗ ಅವರ ಕಷ್ಟ ಇವರಿಗೆ ಅರ್ಥವಾಗು

ತ್ತದೆ. ಈ ರೀತಿ ತೊಂದರೆಗೊಳಗಾದವರನ್ನು ತಕ್ಷಣ ರಕ್ಷಿಸಲು ''ಡಿಸಾಸ್ಟರ್ಸ್ ಸೆಲ್'' ಎಂದು ಮಾಡ ಬೇಕು ಮತ್ತು ತೊಂದರೆಗೊಳಗಾದ ಸುದ್ದಿ ಬಂದ ಕೂಡಲೇ ಆ ಸೆಲ್‌ನವರು ಕಾರ್ಯಮಗ್ನರಾಗಬೇಕು. ಈ ರೀತಿ ಮಾಡಿದರೆ ತೊಂದರೆಗೊಳಗಾದವರಿಗೆ ಸೂಕ್ತ ಕಾಲದಲ್ಲಿ ಪರಿಹಾರ ಕೊಡುವುದಕ್ಕೆ ಸಾಧ್ಯವಾಗು ತ್ತದೆ. ಇಲ್ಲದಿದ್ದರೆ ಆಗುವುದಿಲ್ಲ. ದಯವಿಟ್ಟು ಮಾನ್ಯ ಮಂತ್ರಿಗಳು ಇತ್ತ ಗಮನ ಹರಿಸಿ, ಒಂದು ''ಡಿಸಾಸ್ಟರ್ಸ್ ಸೆಲ್''ನ್ನು ಮಾಡಬೇಕೆಂದು ಹೇಳುತ್ತೇನೆ. ಶಾಮಣ್ಣನವರು, ರಾಮದೇವ್‌ರವರು ಹೇಳಿದ ಹಾಗೆ ಆಹಾರವನ್ನು ಒದಗಿಸಿದ್ದಾರೆ. ಬಿದ್ದು ಹೋಗಿರತಕ್ಕ ಮನೆಗಳಿಗೆ ಏನು ಪರಿಹಾರ ಕೊಟ್ಟಿ ದ್ದಾರೆಂಬುದನ್ನು ತಿಳಿಸಲಿಲ್ಲ. ನಾವು ತಪ್ಪನ್ನು ಕೇಳಿಕೊಳ್ಳುವುದು ಆದಷ್ಟು ಜಾಗ್ರತೆ ಪರಿಹಾರ ಕೊಡ ಬೇಕು. ನೆರೆ ಬಂದು ತೊಂದರೆಯಾದವರಿಗೆ ಪರಿಹಾರ ಕೊಡುತ್ತೀರಿ. ಕಾರ್ಪೊರೇಷನ್‌ನವರು ಕೊಡು ವುದಕ್ಕೆ ಅವನ ಹತ್ತಿರ ಹಣ ಇಲ್ಲ. ಬಿದ್ದು ಹೋಗಿರತಕ್ಕ ಮನೆಗಳಿಗೆ ನಿಗದಿಯಾದ ಹಣವನ್ನು ಪರಿಹಾರ ಕೊಡುವ ಬಗ್ಗೆ ಸದನದಲ್ಲಿ ತಿಳಿಸಬೇಕು. ನಮಗೂ ಸಂತೋಷವಾಗುತ್ತದೆ, ನಮಗಿಂತ ಆ ಬಡ ಜನ ಗಳಿಗೆ ಅನುಕೂಲವಾಗುತ್ತದೆ.

ಶ್ರೀ ಸಿ. ಎಂ. ಇಬ್ರಾಹಿಂ.—ಟ್ಯಾಂಕ್‌ಬಂಡ್ ಸ್ಲಮ್ ನೋಟಿಫೈ ಆಗಿಲ್ಲವೆಂದು ಮಂತ್ರಿಗಳು ಹೇಳಿ ದರು. ಆಹಾರ ಇಲಾಖೆಯವರು ಪಡಿತರ ಟೀಟಿಗಳನ್ನು ಕೊಟ್ಟಿದ್ದಾರೆ. ಮತದಾರರ ಪಟ್ಟಿಯನ್ನು ಬರೆದುಕೊಂಡು ಹೋಗಿದ್ದಾರೆ. ಸುಮಾರು ೩,೦೦೦ ಜನ ಅಲ್ಲಿ ವಾಸವಾಗಿದ್ದಾರೆ....

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಇಬ್ರಾಹಿಂ ಸಾಹೇಬರವರ ಕ್ಷೇತ್ರ ಇರಬಹುದು. ಅವರು ಇಂಥ ಕಾರ್ಯಗಳಿಗೆ ಉತ್ತೇಜನ ಕೊಡಬಾರದು. ಕೆರೆ ಅಂಗಳದ ಜಾಗವನ್ನು ಕೊಟ್ಟುಬಿಡಿ ಎಂದು ಹೇಳುವುದು ಸರಿಯಲ್ಲ. ಅವರಿಗೆ ಕಾಯಂ ಆಗಿ ಪುನರ್ ವಸತಿಗೆ ಅನುಕೂಲ ಮಾಡಬೇಕಾದ ಜವಾಬ್ದಾರಿ ಇದೆ. ಅದನ್ನು ಮಾಡೋಣ.

ಶ್ರೀ ಸಿ. ಎಂ. ಇಬ್ರಾಹಿಂ.—ಪುನರ್ ವಸತಿಯನ್ನು ಎಷ್ಟು ವರ್ಷದಲ್ಲಿ ವ್ಯವಸ್ಥೆ ಮಾಡುತ್ತೀರಾ ? ಅವರನ್ನು ಅಲ್ಲಿಂದ ಖಾಲಿ ಮಾಡಿಸತಕ್ಕ ಜವಾಬ್ದಾರಿಯನ್ನು ನಾನು ಹೊತ್ತು ಕೊಳ್ಳುತ್ತೇನೆ. ನಾಲ್ಕು ವರ್ಷದಿಂದ ಹೇಳುತ್ತಿದ್ದೀರಿ. ನಾಲ್ಕು ಜನ ಮಕ್ಕಳು ಸತ್ತು ಹೋಗಿದ್ದಾರೆ. ಅದಕ್ಕೆ ಏನು ಪರಿಹಾರ ಕೊಡುತ್ತೀರಿ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಕೆರೆ ಅಂಗಳದಲ್ಲಿ ಗುಡಿಸಲುಗಳನ್ನು ಹಾಕಿಕೊಂಡರೆ ಮಳೆ ಬಂದಾಗ ಕೊಚ್ಚಿ ಹೋಗುವುದಿಲ್ಲವೆ ?

ಶ್ರೀ ಸಿ. ಎಂ. ಇಬ್ರಾಹಿಂ.—ಗುಡಿಸಲು ಹಾಕಿರುವವರು ನಿಮ್ಮ ಪಾರ್ಟಿಯವರೇ ದೇವರಾಜ ಕಾಲೋನಿ ಎಂದು ಹೆಸರಿಟ್ಟಿದ್ದಾರೆ. ಉಳಿಸಂವುದಕ್ಕೆ ನಾವು ಹೋಗಬೇಕಾಗಿದೆ.

ಶ್ರೀ ಎಂ. ವಿ. ರಾಜಶೇಖರನ್.—ಕೊಳಚೆ ಪ್ರದೇಶಗಳು ಬೆಳೆಯುವುದಕ್ಕೆ ಅವಕಾಶ ಕೊಡುವುದು ಉತ್ತೇಜನ ಕೊಡುವುದು ಸರಿಯಲ್ಲ. ಕೊಳಚೆ ಪ್ರದೇಶಗಳು ಬರುವುದಕ್ಕೆ ಯಾರು ಕಾರಣ ? ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನತೆ ತಮ್ಮ ಜೀವನಕ್ಕೆ ದಾರಿ ಕಾಣದೆ ಪಟ್ಟಣಗಳಿಗೆ ಬಂದು ನೆಲೆಸು ವುದು ಜಾಸ್ತಿಯಾಗಿದೆ. ಗ್ರಾಮಾಂತರ ಜನತೆಗೆ ಕೆಲಸ ಒದಗಿಸಿದರೆ ಇದನ್ನು ತಪ್ಪಿಸಬಹುದು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ನಮ್ಮ ಹಳ್ಳಿ ಪ್ರದೇಶದಿಂದ ಯಾರು ಬಂದು ಇಲ್ಲಿ ನೆಲೆಸಿರುವುದಿಲ್ಲ. ಆಂಧ್ರಪ್ರದೇಶ ಮತ್ತು ತಮಿಳುನಾಡುಗಳಿಂದ ಬಂದು ಇಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ಇದ್ದಾರೆ. ೪-೫ ಸ್ಲಮಂಗಳಲ್ಲಿಯೂ ಇವರ ಹೆಸರುಗಳು ಇವೆ. ಇದನ್ನು ತಡೆಗಟ್ಟುವುದಕ್ಕೆ ಕಾನೂನು ತರುತ್ತಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ.—ರೈಲ್ವೆ ಸ್ಟೇಷನ್ ಅಂಡರ್ ಬ್ರಿಡ್ಜ್ ಕೆಳಗೆ ಸೊಂಟದ ಉದ್ದ ನೀರು ನಿಂತಿರುತ್ತದೆ. ಇದರ ಬಗ್ಗೆ ಏನು ಮಾಡುತ್ತೀರಿ ಹೇಳಿ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ನೀರು ಇವತ್ತು ಹೋಗಬೇಕಾದರೆ ಓಪನ್ ಡ್ರೈನ್ ಇರತಕ್ಕ ಅವಶ್ಯಕ. ಡ್ರೈನೇಜುಗಳ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಮುಚ್ಚಿರುವ ಹುಲ್ಲನ್ನು ತೆಗೆಯು ವುದಕ್ಕಾಗುತ್ತಿಲ್ಲ. ಬೆಂಗಳೂರು ಕಾರ್ಪೊರೇಷನ್ನಿನಲ್ಲಿ ಶಾಮಣ್ಣನವರು, ರಾಮದೇವ್ ಮೊದಲೇ ಸರಿ ಯಾದ ವ್ಯವಸ್ಥೆ ಮಾಡಿದ್ದರೆ ಚೆನ್ನಾಗಿತ್ತು.

ಶ್ರೀ ಎಂ. ವಿ. ರಾಜಶೇಖರನ್.—ಬಡವರ ಮನೆಗಳು ನೀರಿನಲ್ಲಿ ಮುಳುಗಿ ಬಿದ್ದು ಹೋಗಿವೆ. ಅವುಗಳಿಗೆ ಕೂಡಲೇ ಪರಿಹಾರ ಕೊಡುವುದಕ್ಕೆ ವ್ಯವಸ್ಥೆ ಮಾಡಿಸುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಬಡವರ ಮನೆಗಳು ಮುಳುಗಡೆಯಾಗಿ ಯಾರು ತೊಂದರೆಗೆ ಗುರಿಯಾಗಿದ್ದಾರೆ, ಅವುಗಳನ್ನು ಅಂದಾಜು ಮಾಡಿಸಿ ಪರಿಹಾರ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಐ.ಪಿ.ಡಿ. ಸಾಲಪ್ಪ.—ಮೊನ್ನೆ ಬಂದಂತ ಮಳೆಯಿಂದ ಒಂದೂವರೆ ಸಾವಿರ ಕೋಳಿಗಳು ಸತ್ತು ಹೋಗಿವೆ. ಮಕ್ಕಳು ಕೂಡ ಸತ್ತು ಹೋಗಿದ್ದಾರೆ. ಇದಕ್ಕೆ ಪರಿಹಾರ ಏನು ಕೊಡುತ್ತೀರಾ ? ಇದರ ವಿಚಾರದಲ್ಲಿ ಸರ್ಕಾರದ ನೀತಿ ಏನು ಎಂಬುದನ್ನು ಸಭೆಗೆ ತಿಳಿಸಬೇಕೆಂದು ಪ್ರಾರ್ಥಿಸಿ ಕೊಳ್ಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಸರ್ಕಾರದ ನೀತಿಯನ್ನು ಬೇರೆ ಸಂದರ್ಭದಲ್ಲಿ ತಿಳಿಸುತ್ತೇನೆ. ಸಾಲಪ್ಪನವರು ಕೋಳಿ ವಿಚಾರವನ್ನು ನನಗೆ ತಿಳಿಸಿದ ಮೇಲೆ, ಕಾರ್ಪೊರೇಷನ್ ಅಡ್ಮಿನಿಸ್ಟ್ರೇಟರನ್ನು ಮಾರನೆ ಬೆಳಿಗ್ಗೆ ಕಳುಹಿಸಿದ್ದೆ, ಅದು ಕಾರ್ಪೊರೇಷನ್ ಸಂಬಂಧಪಟ್ಟದ್ದಲ್ಲ. ಬೇರೆ ಪ್ರದೇಶದಲ್ಲಿ ರತಕ್ಕಂಥಾದ್ದಕ್ಕೆ ಪರಿಹಾರ ಕೊಡುವುದಕ್ಕೆ ಕಾರ್ಪೊರೇಷನ್ನಿಂದ ಬರುವುದಿಲ್ಲವೆಂದು ತಿಳಿಸಿದ್ದಾರೆ. ಈ ವಿಚಾರದಲ್ಲಿ ಯೋಚನೆ ಮಾಡುತ್ತಿದ್ದೇವೆ.

V. PRESENTATION OF REPORTS.

SRI S. MUNIRAJU (Chairman).— I present the First Report of the Committee on Subordinate Legislation.

SRI M. VEERAPPA MOILY (Chairman).— I present the twelvfth report of the Committee on public Undertakings regarding Karnataka State Financial Corporation, Bangalore.

MADAM DEPUTY SPEAKER.— The reports are presented.

VI. PRESENTATION OF PETITIONS.

(A) SRI N. B. SIRDESAI.— Madam Deputy Speaker, I present the following petitions.

(1) Petition signed by Sri Narayana Rao Salappa Patil and others belonging to Kumbara Caste people re-issued of Backward Class Certificates to the Kumbar Caste students and to extend all Government sponsored facilities.

(2) Petition signed by Forest Contractors, Belgaum, Dharwar regarding hardship caused to the contractors due to ban order on the sale and transport of forest material to Maharastra.

(3) Petition signed by Sri K. D. Phadnis, Retired Principal re encashment of 120 days of Earned Leave before retired.

(4) Petition signed by Teachers of Khanapur Taluk Primary School regarding recognising the services of Primary School Teachers working in Private Schools and awarding selection grade scale to the Teachers.